ವಿಜಯ ಸಿಂಧೂರ

VIJAY SINDHUR

ಕೆ. ವಿ. ಸುಬ್ರಹ್ಮಣ್ಯಂ
K. V. Subrahmanyam



ಕರ್ನಾಟಕ ಲಲಿತಕಲಾ ಅಕಾಡೆಮಿ
KARNATAKA LALITHAKALA ACADEMY

ವಿಜಯ ಸಿಂಧೂರ
Vijay Sindhur

ಕೆ.ವಿ. ಸುಬ್ರಹ್ಮಣ್ಯಂ
K.V. Subrahmanyam



ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ೨ನೇ ಮಹಡಿ, ಜೆ.ಸಿ. ರಸ್ತೆ, ಬೆಂಗಳೂರು - ೫೬೦ ೦೦೨
Karnataka Lalithakala Academy
Kannada Bhavana, 2nd Floor, J.C. Road, Bangalore - 560 002

VIJAY SINDHUR, *a Biography by K.V. Subrahmanyam*
Published by **H. Shankarappa,** Registrar, **Karnataka Lalithakala Academy**
Nrupathunga Road, Bangalore -560 001

Pages: viii + 46

First Impression : 2000

Price : Rs. 35/-

ಪ್ರಧಾನ ಸಂಪಾದಕರು
ಪ್ರೊ. ಅಂದಾನಿ ಎ.ಜಿ.

ಪ್ರಕಟಣಾ ಸಮಿತಿ
ಶ್ರೀ ಚಿ. ಸು. ಕೃಷ್ಣಸೆಟ್ಟಿ
ಶ್ರೀ ಆರ್.ಜಿ.ರಾಯ್ಕರ್
ಶ್ರೀ ರಾಜೇಂದ್ರ ಅಷ್ಟಗಿ
ಶ್ರೀ ಅಶೋಕ ಟಿ. ಅಕ್ಕಿ
ಶ್ರೀಮತಿ ಬಾನುಮುನಾಫ್

ಪ್ರಕಾಶಕರು
ಶ್ರೀ ಎಚ್. ಶಂಕರಪ್ಪ
ರಿಜಿಸ್ಟ್ರರ್

Translated by
Shri K.V. Subrahmanyam

Printed by
Sathyasri Printers Pvt. Ltd.,
Chamarajapet, Bangalore -560 018. Tele: 6525736

ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಮುಖ ಯೋಜನೆಗಳಲ್ಲೊಂದಾದ ಪುಸ್ತಕ ಪ್ರಕಟಣೆಯ ಯೋಜನೆಯಲ್ಲಿ ಈಗಾಗಲೇ ಅನೇಕ ಹಿರಿಯ ಮತ್ತು ಸಮಕಾಲೀನ ಕಲಾವಿದರನ್ನು ಕುರಿತು ಪುಸ್ತಕಗಳು ಹೊರಬಂದಿವೆ. ಈ ಪುಸ್ತಕಗಳು ಕಲಾವಿದರ ಜೀವನ ಮತ್ತು ಅವರ ಕಲೆಯ ಪರಿಚಯ ಮಾಡಿಕೊಡುವುದರ ಜೊತೆಗೆ ಕಲಾಕ್ಷೇತ್ರದಲ್ಲಾದ ಬೆಳವಣಿಗೆಯ ಬಗ್ಗೆಯೂ ತಿಳಿಯಲು ಸಹಾಯಕವಾಗಬಲ್ಲವು.

ಸಮಕಾಲೀನ ಕಲಾವಿದರ ಮಾಲೆಯಲ್ಲಿ ಈಗ ವಿಜಯ ಸಿಂಧೂರ ಅವರ ಬಗೆಗಿನ ಶ್ರೀ ಕೆ.ವಿ. ಸುಬ್ರಹ್ಮಣ್ಯಂರವರು ಬರೆದಿರುವ ಪುಸ್ತಕವನ್ನು ಹೊರತರಲು ನನಗೆ ಅತೀವ ಸಂತೋಷವಾಗುತ್ತಿದೆ. ಸಿಂಧೂರರ ಪರಿಚಯ ನನಗೆ ಅನೇಕ ವರ್ಷಗಳದ್ದು. ನನ್ನ ಕಲಬುರ್ಗಿಯಂತೆಯೇ ನಿರಂತರ ಬರಗಾಲ ಪೀಡಿತವಾದ ಬಿಜಾಪೂರ ಜಿಲ್ಲೆಯ ಜಮಖಂಡಿಯವರಾದ ಇವರು ಆ ಪ್ರದೇಶದ ಶ್ರೀಮಂತ ಸಾಂಸ್ಕೃತಿಕ ಪರಂಪರೆಗೆ ತಮ್ಮ ಕಲಾ ಸಾಧನೆಯ ಮೂಲಕ ಅಮೋಘ ಕೊಡುಗೆ ನೀಡುತ್ತಾ ಬಂದಿದ್ದಾರೆ. ಈ ಶತಮಾನದ ಅಂತ್ಯಕ್ಕೆ ತಮ್ಮ ೬೦ ವಸಂತಗಳನ್ನು ವರ್ಣಮಯವಾಗಿ ಪೂರೈಸಲಿರುವ ಇವರು ಸದಭಿರುಚಿಯ ಕಲಾವಿದರು. ಜಮಖಂಡಿಯನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡ ಇವರು ಕಲಾಸಾಧನೆಯ ಜೊತೆಗೆ ಸಾಹಿತ್ಯ ಸಂಗೀತದಲ್ಲಿ ಅಭಿರುಚಿಯುಳ್ಳವರಾಗಿ ತಮ್ಮ ಚಿತ್ರಶಾಲೆಯನ್ನು ಕಲಾಭಿಮಾನಿಗಳಿಗೆ ಸ್ಫೂರ್ತಿದಾಯಕವಾಗಿಸಿದ್ದಾರೆ. ರಾಷ್ಟ್ರದ ಸಮಕಾಲೀನ ಕಲಾವಿದರ ಸಾಲಿನಲ್ಲಿ ಒಬ್ಬರಾಗಿರುವ ಸಿಂಧೂರರವರು ನಿರಂತರ ಕ್ರಿಯಾಶೀಲರು. ಕಲಾಕೃತಿಗಳನ್ನು ಕಾವ್ಯಾತ್ಮಕಗೊಳಿಸುವ ವರ್ಣವಿಧಾನವನ್ನು ರೂಢಿಸಿಕೊಂಡಿರುವ ಇವರು ಭಾವಚಿತ್ರ ರಚನೆಯಲ್ಲಿಯೂ ವಿಶಿಷ್ಟಸ್ಥಾನವನ್ನು ಪಡೆದವರು. ನವ್ಯಕ್ಕೆ ಕೋಮಲತೆಯ ಸ್ಪರ್ಶಕೊಟ್ಟು ಮನೋಲ್ಲಾಸವನ್ನುಂಟು ಮಾಡುವ ಇವರ ಚಿತ್ರಗಳಲ್ಲಿ ಸಂಗೀತದ ಮಾಧುರ್ಯವನ್ನು ಅನುಭವಿಸಬಹುದು. ಇವರು ರಚಿಸಿದ 'ಚಿಟ್ಟೆಗಳು', 'ಮೇಕೆಗಳು', 'ಕಾಕ್ಟಸ್', 'ನನ್ನ ಹುಟ್ಟೂರಿನ ಸ್ಥಳ' ಚಿತ್ರಗಳು ಹಾಗೂ 'ಭಗ್ನ ಬಿಜಾಪುರ'ಮುಂತಾದ ಸರಣಿ ಕೃತಿಗಳು ಇವರ ಕಲಾಸಾಧನೆಗೆ ಪ್ರತ್ಯಕ್ಷ ಪುರಾವೆಗಳು.

ಸಿಂಧೂರರನ್ನು ಸಮೀಪದಿಂದ ಬಲ್ಲ ಲೇಖಕರು ಶ್ರೀ ಕೆ.ವಿ. ಸುಬ್ರಹ್ಮಣ್ಯಂ ಕಲಾವಿದರ ಜೀವನದ ಒಳನೋಟಗಳ ಚಿತ್ರವನ್ನು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಮಾರ್ಮಿಕವಾಗಿ ನಮ್ಮ ಮುಂದೆ ತೆರೆದಿಟ್ಟಿದ್ದಾರೆ ಅವರನ್ನು ಅಕಾಡೆಮಿಯ ಪರವಾಗಿ ಮತ್ತು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ.

ಅಕಾಡೆಮಿಯ ಸದಸ್ಯರಾದ ಡಾ. ಹೆಚ್. ಚಂದ್ರಶೇಖರ ಅಚ್ಚಿನ ಕರಡನ್ನು ತಿದ್ದಿ ಮುದ್ರಣದ ಮೇಲ್ವಿಚಾರಣೆಯನ್ನು ನೋಡಿಕೊಂಡಿದ್ದಾರೆ. ಈ ಶ್ರಮದಾಯಕ ಕೆಲಸಕ್ಕಾಗಿ ಅಕಾಡೆಮಿಯ ಪರವಾಗಿ ಕೃತಜ್ಞತೆಗಳು.

ಕಲಾವಿದರು, ಕಲಾರಸಿಕರು ಮತ್ತು ಸಾಹಿತ್ಯಾಭಿಮಾನಿಗಳು ಅಕಾಡೆಮಿಯ ಈ ಕೃತಿಯನ್ನು ಸ್ವಾಗತಿಸುತ್ತೀರೆಂದು ಭಾವಿಸುತ್ತೇನೆ.

ಅಂದಾನಿ. ವಿ.ಜಿ.
ಅಧ್ಯಕ್ಷರು


ನಿಮ್ಮೊಂದಿಗೆ.....

'ಅಕೆಡೆಮಿ' ಎಂಬ ವ್ಯವಸ್ಥೆಯೇ ಬಹುತೇಕ ಸೃಜನಶೀಲರು ಮಡಿವಂತಿಕೆಯಿಂದ ನೋಡುವಂಥ ಇತಿಹಾಸವನ್ನು ಹೊಂದಿದ್ದರೂ ಭಾರತೀಯ ಸಂದರ್ಭದಲ್ಲಿ ಈ ಅನುಭವಕ್ಕೆ ವಿಭಿನ್ನವಾಗಿ ಕರ್ನಾಟಕ ರಾಜ್ಯ ಲಲಿತ ಕಲಾ ಅಕೆಡೆಮಿ ರಾಷ್ಟ್ರದ ಉಳಿದೆಲ್ಲ ರಾಜ್ಯಗಳ ಲಲಿತ ಕಲಾ ಅಕೆಡೆಮಿಗಳಿಗಿಂತಲೂ (ಕೇಂದ್ರ ಲಲಿತ ಕಲಾ ಅಕೆಡೆಮಿಯನ್ನು ಹೊರತು ಪಡಿಸಿ) ಹೆಚ್ಚಿನ, ಕೆಲವೊಮ್ಮೆ ಅಪೂರ್ವವೆನ್ನಬಹುದಾದ ಯೋಜನೆಗಳನ್ನು ಕಲೆಯ ಸಾಹಿತ್ಯ ವಿಭಾಗದಲ್ಲಿ ಸಾಧಿಸಿ, ಮಿತಿಗಳನ್ನು ಮೀರಿ ಬೆಳೆದಿದೆ. ನಮ್ಮ ಇಂದಿನ ಸಂದರ್ಭದ ಕನ್ನಡದ ಪ್ರಮುಖ ಕಲಾವಿಮರ್ಶಕರು, ಇತಿಹಾಸಕಾರರು ರಾಜ್ಯ ಲಲಿತ ಕಲಾ ಅಕೆಡೆಮಿಯ ಸಾಹಿತ್ಯದ ಪ್ರಕಟಣೆಗಳಲ್ಲಿ ಪಾಲ್ಗೊಂಡಿದ್ದಾರೆ ಎಂಬುದು ಒಂದು ವಿಶೇಷ. ಆದರೆ ಮೂಲತಃ ಅಕೆಡೆಮಿಗಿರುವ ಮಿತಿಗಳನ್ನು ಕೆಲವು ಸಂದರ್ಭಗಳಲ್ಲಿ ಮೀರಲಾಗದೆ, ಕಲೆಯ ಸಾಹಿತ್ಯ ಸೃಷ್ಟಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಉಂಟಾಗುವ ತೊಡಕುಗಳಿಂದ ಈ ಸಾಹಿತ್ಯ ಗುಣಾತ್ಮಕವಾಗಿ ಬಡವಾಗಿರುವುದೇ ಹೆಚ್ಚು. ಈ ಮಾತುಗಳಿಗೆ ಪ್ರಸ್ತುತ ವಿಜಯ ಸಿಂಧೂರರ ಕಲೆ ಮತ್ತು ಬದುಕನ್ನು ಕುರಿತ ಈ ಪ್ರಕಟಣೆಯು ಉದಾಹರಣೆಯಾಗಿ ನಿಲ್ಲಬಲ್ಲದು. ವಿಜಯಸಿಂಧೂರರ ವಿಶಿಷ್ಟ ಭೂದೃಶ್ಯಗಳ ನಡುವೆ ಬಿಸಿಲಿನ ಬೇಗೆಯಲ್ಲಿ ಸುಡುವ ಉತ್ತರ ಕರ್ನಾಟಕದ ಜಮಖಂಡಿ ಆಹ್ಲಾದಕರ ಅನುಭವ ನೀಡುತ್ತದೆ. ಮುಂಜಾನೆ ಹಾಗೂ ಸಂಜೆಗಳಲ್ಲಿ ಜಮಖಂಡಿಗೆ ಸೆರಗಿನಂತೆ ಹೊಂದಿಕೊಂಡಿರುವ ವಿಶಿಷ್ಟ ಕಲ್ಲು-ಮಣ್ಣುಗಳ ರಾಮತೀರ್ಥ ಗುಡ್ಡದ ಮೇಲಿನಿಂದ ಸುತ್ತಲಿನ ಪ್ರಕೃತಿಯ ಬಣ್ಣಗಳ ಛಾಯಾಂತರ, ಸೂರ್ಯನ ಮೂಲದ ಬದಲಾಗುವ ಬೆಳಕಿನ ನಂತರದ ನಸುಗತ್ತಲಿನ ಜೊತೆಗೆ ಆ ಸಂದರ್ಭದ ಮೌನರಾಗದ ಹಿಮ್ಮೇಳದಂಥ ಪಕ್ಷಿಗಳ ಚಿಲಿಪಿಲಿ ಅನುಭವ ಸಿಮೆಂಟ್ ಕಾಡಿನ, ಗಡಿಬಿಡಿ ನಗರ ಜೀವನದ ಇಂದಿನ ದಿನಗಳಲ್ಲಿ ಯಾರಿಗೆ ಬೇಡ? ಈ ಪರಿಸರದಲ್ಲಿ ಆತ್ಮೀಯ ಜನರ ನಡುವೆ ಬಗೆಬಗೆಯ ಬಳ್ಳಿ, ಹೂಗಳ ಬದಿಯಲ್ಲಿ ಅವರ ಮನೆಯಲ್ಲಿ ಸಂಗೀತ ಕೇಳುತ್ತಾ ಪ್ರಕೃತಿಯ ಹಲವು ಒಳನೋಟಗಳ ಅನುಭವ ನೀಡುವ, ಬಣ್ಣ ಬೆಡಗು - ಬೆಳಕು - ನೆರಳುಗಳ ವೈವಿಧ್ಯಮಯ ಹೊರ ನೋಟಗಳು ನೋಡುವ ಕಣ್ಣಿನ ದೃಷ್ಟಿಯ ಉದ್ದೇಶಗಳನ್ನು ಬದಲಿಸಿ ಬಿಡಬಲ್ಲವು. ಭೂ ದೃಶ್ಯ ಕಲೆಯ ಪರಂಪರೆ ಪಶ್ಚಿಮದಿಂದ ನಮ್ಮಲ್ಲಿ ದೊಡ್ಡ ರೀತಿಯಲ್ಲಿ ಪ್ರಾರಂಭವಾಗಿ ಹಲವು ಮಹತ್ವದ ಭೂದೃಶ್ಯ ಕಲಾವಿದರನ್ನು ನಾವು ನೋಡುವಂತೆ ಮಾಡಿದೆ. ಹಲವು ಹಿರಿಯರನ್ನು ಅನುಸರಿಸಿ ತಮ್ಮದೇ

ಆದ ಹಾದಿಯಲ್ಲಿ ಸ್ವೋಪಜ್ಞತೆಯನ್ನು ಸಾಧಿಸಿರುವ ಹಲವರು ನಮ್ಮ ನಡುವೆ ಇದ್ದಾರೆ; ಕಿರಿಯರೂ ಅಸಾಮಾನ್ಯ ಪ್ರತಿಭೆಯನ್ನು ತೋರಿದ್ದಾರೆ. ಈ ಎಲ್ಲರ ಭೂ ದೃಶ್ಯಗಳಲ್ಲಿ ಅವರ ವೈವಿಧ್ಯಮಯ ಶೈಲಿ, ಮಾಧ್ಯಮಗಳ ನಿರ್ವಹಣೆ ಹಾಗೂ ಕರ್ನಾಟಕದ ನೆಲ - ಜಲ - ಆಕಾಶಗಳನ್ನು, ಜನರ ಬದುಕನ್ನು, ಸಾಂಸ್ಕೃತಿಕ ಆಕರಗಳಂಥ ಸ್ಥಳಗಳನ್ನು ನೋಡಿರುವ ಅವರ ಕಣ್ಣಿನ ಹುಡುಕಾಟ - ಕಾತರತೆಗಳನ್ನು ನಾವು ಅನುಭವಿಸಬಹುದಾಗಿದೆ. ಈ ಕಲಾಕೃತಿಗಳ ನಡುವೆ ತಮ್ಮತನವನ್ನು ಮೆರೆಯುವ ಭೂದೃಶ್ಯಗಳನ್ನು ಸೃಷ್ಟಿಸಿರುವ ವಿಜಯ ಸಿಂಧೂರ್ ತಮ್ಮದೇ ಆದ ವಿಶೇಷ ಸ್ಥಾನವನ್ನು ಹೊಂದಿದ್ದಾರೆ. ಪಶ್ಚಿಮದ ಪ್ರಭಾವದ ನಡುವೆ ವಿಭಿನ್ನವಾಗಿ ನಮ್ಮ ನೆಲದ ಅಂತಃಸತ್ವವನ್ನು ಅನುಭವಕ್ಕೆ ತರುವಂತೆ ಬಿಂಬಿಸಿದ್ದಾರೆ. ಈ ಕೃತಿಗಳನ್ನು ಹಲವು ಬಾರಿ ನೋಡುವ ಅನುಭವಿಸುವ ಆ ಬಗ್ಗೆ ಬರೆಯುವ ಅವಕಾಶವನ್ನು ಕರ್ನಾಟಕ ಲಲಿತ ಕಲಾ ಅಕೆಡೆಮಿ ನನಗೆ ಒದಗಿಸಿತ್ತು. ಈ ಮೊದಲೇ ಹೇಳಿರುವ 'ಹಲವು ಮಿತಿಗಳ' ನಡುವೆ ಮೂಡಿ ಬಂದಿರುವ ಈ ಬರಹ ಬರೆಯಲು ಅಕೆಡೆಮಿಯ ಅಧ್ಯಕ್ಷರು, ಸದಸ್ಯರು ಕಾರಣರಾಗಿದ್ದಾರೆ. ಈ ಪುಸ್ತಕ ಪ್ರಕಟಣೆಯಲ್ಲಿ ಅಕೆಡೆಮಿಯ ಅಧ್ಯಕ್ಷರಾಗಿರುವ ಪ್ರೊ ವಿ.ಜಿ. ಅಂದಾನಿ, ರಿಜಿಸ್ಟ್ರಾರ್ ಶ್ರೀ ಶಂಕರಪ್ಪ ಹಾಗೂ ಪುಸ್ತಕ ಪ್ರಕಟಣಾ ಸಮಿತಿಯ ಮಿತ್ರರು ನೆರವಾಗಿದ್ದಾರೆ. ಅಕೆಡೆಮಿಯ ಪುಸ್ತಕ ಪ್ರಕಟಣಾ ಸಮಿತಿಯ ಡಾ॥ ಹೆಚ್. ಚಂದ್ರಶೇಖರರವರು ಕರಡು ಪ್ರತಿಯನ್ನು ನೋಡಿ ಕೊಟ್ಟಿದ್ದಾರೆ. ನನ್ನ ಇಂಗ್ಲೀಷ್ ಅನುವಾದದ ಮೇಲೆ ಶ್ರೀ ಎಚ್.ಎ. ಅನಿಲ್‌ಕುಮಾರ್ ಒಮ್ಮೆ ಕಣ್ಣಾಡಿಸಿದ್ದಾರೆ. ವಿಜಯ ಸಿಂಧೂರರ ಮನೆಯ ಮುಳ್ಳುಗಿಡದಲ್ಲಿ ಬಿಟ್ಟಿದ್ದ ಹೂಗಳನ್ನು ಕಂಡು, ಪ್ರತಿಕ್ರಿಯಿಸಿ ಬರೆದ ತಮ್ಮ ಕನ್ನಡ ಕವಿತೆಯನ್ನು ಬಳಸಿಕೊಳ್ಳಲು ಮಿತ್ರರಾದ ಶ್ರೀ ರಮಜಾನ್ ದರ್ಗಾ ಆತ್ಮೀಯತೆಯಿಂದ ಒಪ್ಪಿಗೆ ನೀಡಿದ್ದಾರೆ. ಸತ್ಯಶ್ರೀ ಪ್ರಿಂಟರ್ಸ್ ವಿಶೇಷ ರೀತಿಯಲ್ಲಿ ಮುದ್ರಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ವಂದನೆಗಳು.


ಬೆಂಗಳೂರು **ಕೆ.ವಿ. ಸುಬ್ರಹ್ಮಣ್ಯಂ**

ಫೆಬ್ರವರಿ ೨, ೨೦೦೦



ವಿಜಯ ಸಿಂಧೂರ

VIJAY SINDHUR



ವಿಜಯ ಸಿಂಧೂರ

''ಮುಳ್ಳುಗಳೇ ಹೂವಾಗಿ ಬನ್ನಿ
ಮುಳ್ಳುಗಳೇ ಕನಸಾಗಿ ಬನ್ನಿ
ರಂಗುರಂಗಿನ ಪುಷ್ಪಗಳ ತನ್ನಿ

ಮನೆಯಂಗಳದಿ ಬೊಗಸೆ ನೀರಿಗೆ
ಅರಳಿ ನಿಲ್ಲುವ ಕಂಟಿಗಳೇ
ಮನದಂಗಳಕೆ ಬನ್ನಿ ನೆನಪಾಗಿ

ಒಂದು ಕ್ಷಣದ ಬದುಕಿಗಾಗಿ
ಜೀವ ಸ್ಪಂದಿಸುತ್ತಿದೆ ಬನ್ನಿ
ಮುಳ್ಳುಗಳೇ ಹೂವಾಗಿ ಬನ್ನಿ''

- ರಂಜಾನ್ ದರ್ಗಾ★

ಬದುಕನ್ನು ಪ್ರೀತಿಸುವ **ವಿ.ಜಿ. ಸಿಂಧೂರ**, ಪ್ರಕೃತಿಯನ್ನು ತಮ್ಮ ಅಭಿವ್ಯಕ್ತಿಯ ಮೂಲ ಆಶಯವನ್ನಾಗಿಸಿಕೊಂಡಿರುವವರು. ತಾವು ಹುಟ್ಟಿದ ಮಣ್ಣು ಮುಗಿಲು, ಆಕಾಶ, ಸುತ್ತಲಿನ ಮರಗಿಡ, ಪ್ರಾಣಿ, ಪಕ್ಷಿ ಜನರನ್ನು ಪ್ರೀತಿಸುತ್ತ ತಮ್ಮ ಕಲಾಕೃತಿಗಳಲ್ಲಿ ಇವೆಲ್ಲವನ್ನು ತಂದುಕೊಳ್ಳುತ್ತ ಬದುಕಿನ ಎಲ್ಲ ಭಾವಗಳನ್ನು ಬಣ್ಣಗಳಲ್ಲಿ ಹರಿಸಿ ಆನಂದಿಸುತ್ತಿರುವ ಕಲಾವಿದರು.

ಜಮಖಂಡಿಯ ಶ್ರೀಮಂತ ಕುಟುಂಬದಲ್ಲಿ ಜನಿಸಿದ (೭.೬.೧೯೪೦) ಸಿಂಧೂರರ ಅತ್ಯಂತ ಪ್ರೀತಿಯ ನಡುವೆ ಬಾಲ್ಯವನ್ನು ಕಂಡವರು. ೧೦ನೆಯ ವರ್ಷದ ಕುತೂಹಲದ ಕಣ್ಣು ಮನೆಯಲ್ಲಿದ್ದ **ರವಿವರ್ಮ**ನ ಚಿತ್ರಗಳಲ್ಲಿನ ಪುರಾಣ ಪುರುಷರ ರೂಪಗಳನ್ನು ಚೆನ್ನಾಗಿಯೇ ಗ್ರಹಿಸಿತು; ಪ್ರಾಥಮಿಕ ಪಾಠಶಾಲೆಯ ಅಕ್ಷರ, ಅಂಕಿ-ಸಂಖ್ಯೆಗಳೊಂದಿಗಿನ ಆಟದ ಜೊತೆ ಜೊತೆಗೇ

★ ಕವಿ ರಂಜಾನ್ ದರ್ಗಾರವರು ಸಿಂಧೂರರ ಮನೆಯ ಗಿಡವೊಂದನ್ನು ಕಂಡು, ಅನುಭವಿಸಿ ಬರೆದ ಕವನ.

ರಾಷ್ಟ್ರಧ್ವಜದ ಬಣ್ಣ ಹಾಗೂ ಸುತ್ತಲಿನ ಇನ್ನಿತರ ವಸ್ತುಗಳ ರೂಪಗಳೊಂದಿಗೆ ಆಟವಾಡತೊಡಗಿತು. ಜಲವರ್ಣಗಳಲ್ಲಿ **ದತ್ತಾತ್ರೇಯ, ಶಿವಪಾರ್ವತಿ, ಗಣಪತಿ, ನಂದಿ** ಇತ್ಯಾದಿ ರೂಪಗಳನ್ನು ರೇಖಿಸಿ ಬಣ್ಣ ತುಂಬಿದರು. ಪೂಜಾರ್ಹ ವ್ಯಕ್ತಿಗಳ ರೂಪಗಳು ಮತ್ತು ರವಿವರ್ಮನ ಒಲಿಯೋಗ್ರಾಫ್‌ಗಳ ಹಳದಿ, ಕೆಂಪು, ಹಸಿರು ಮತ್ತು ಕಪ್ಪು ಬಣ್ಣಗಳ ಸಂಯೋಜನೆಯೂ ಅವರನ್ನು ಆಕರ್ಷಿಸಿರಬಹುದು. ಇಂದಿಗೂ ಹಾಗೆ ಚಿತ್ರಿಸಿರುವವುಗಳಲ್ಲಿ ಕೆಲವು, ಸಿಂಧೂರರ ಜಮಖಂಡಿಯ ಮನೆಯಲ್ಲಿ ಉಳಿದು ಕೊಂಡಿರುವುದು ಆ ಚಿತ್ರಗಳಿಗೆ ಅವರ ಮನೆಯವರು ನೀಡಿರುವ ಪ್ರಾಮುಖ್ಯತೆಯನ್ನು ತೋರುತ್ತದೆ; ಒಂದೆರಡು ರೇಖಾಚಿತ್ರಗಳೂ ಇವೆ.


ಹೀಗೆ ತಮ್ಮ ಚಿತ್ರಕಲೆಯ ಸಂಬಂಧ ಬೆಳೆಸಿಕೊಂಡ ಸಿಂಧೂರರು ಅತ್ಯುನ್ನತ ಶಿಕ್ಷಣ ಪಡೆದು ಇಂಜನಿಯರ್ ಅಥವಾ ಡಾಕ್ಟರರಾಗಬೇಕೆಂಬ ಬಯಕೆ ಮನೆಯವರದು. ೧೯೫೯ರಲ್ಲಿ ಪ್ರೀ-ಯೂನಿವರ್ಸಿಟಿಯ ತರಗತಿಯಲ್ಲಿ ವಿಜ್ಞಾನವನ್ನು ಐಚ್ಛಿಕ ವಿಷಯುವನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಮಾಡಿದ್ದೂ ಈ ಉದ್ದೇಶ ಸಾಧಿಸಲೆಂದೇ. ಆದರೆ ಕಾಲೇಜಿನ ತರಗತಿಗಳ ನಡುವೆ ರೇಖಿಸುತ್ತ-ಚಿತ್ರಿಸುತ್ತ ಕಾಲ ಕಳೆಯುತ್ತಿದ್ದ ಸಿಂಧೂರರಿಗೆ ೨ ನೆಯ ವರ್ಷದ ಪಿ.ಯೂ.ಸಿ.ಯಲ್ಲಿ ಗಣಿತ ಕೈಕೊಟ್ಟಿತು.

೧೯೬೧ ರಲ್ಲಿ ಪುಣೆಯ ಅಭಿನವ ಕಲಾ ವಿದ್ಯಾಲಯದ ಸಿರ್ಸಿಯ **ಎಸ್.ಎಸ್. ಕಾಮತ್**‌ರವರಲ್ಲಿ ಚಿತ್ರಕಲೆಯ ಅಭ್ಯಾಸ. ಭಾವಚಿತ್ರಣಕ್ಕೆ ಹೆಚ್ಚಿನ ಗಮನ. ನಂತರ ಮುಂಬಯಿಯಲ್ಲಿ ಸರ್ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಕಲಿಯಲಾರಂಭಿಸಿದರು. ಸಿಂಧೂರರು ಗುರು **ಶಂಕರ್ ರಾವ್ ಪಲ್ಸೀಕರ್**‌ರ ಮಾರ್ಗದರ್ಶನದಲ್ಲಿ ಅತ್ಯಂತ ಆಸಕ್ತಿಯಿಂದ ಕಲಿತರು. ರಂಗಭೂಮಿ ಹಾಗೂ ಚಲನಚಿತ್ರ ನಟ **ಅಮೋಲ್‌ಪಾಲೇಕರ್** ಸಿಂಧೂರರ ಸಹಪಾಠಿಗಳಲ್ಲೊಬ್ಬರು. ೧೯೬೪ರಲ್ಲಿ ಚಿತ್ರಕಲೆಯಲ್ಲಿ ಸಿಂಧೂರರು ಡಿಪ್ಲೊಮಾ ಪಡೆದ ನಂತರ ೧೯೬೫ರಲ್ಲಿ ಅಲ್ಲಿಯೇ ಶಿಷ್ಯವೇತನದ ನೆರವಿನಿಂದ ಭಿತ್ತಿಚಿತ್ರಕಲೆಯನ್ನು ಅಭ್ಯಾಸಮಾಡಿದರು.

---

* The ways of seeing the nature of V.G. Sindhur is multifarious, and expressed with strong feeling.

* ... for some central meaning in what is seen, for a distillation of the character, mood or spirit of nature aspects and a more intense expression of the artists response. Abstraction then becomes a logical tool since to abstract is to distill, and to distill is to intensity" - John I.H. Baur THE RELATION OF ABSTRACT ART OF NATURE The voice of America Lectures. Visual Arts - 16, Forum visual Arts Series. P. 3



ಶ್ರವಣಬೆಳಗೊಳದ ಬಂಡೆಗಳು, ಮಾಧ್ಯಮ: ತೈಲವರ್ಣ, 36" x 33"   Rocks of Shravanabelagola, Medium: Oil, 36" x 33"



ಮೀಯುತ್ತಿರುವ ಸುಂದರಿ, ಮಾಧ್ಯಮ: ತೈಲವರ್ಣ, 34" x 40"   Bathing Beauty, Medium Oil 34" x 40"



ಸ್ಥಿತ ಜೀವ, ಮಾಧ್ಯಮ:ತೈಲವರ್ಣ, 25" x 30"

Still Life, Medium:Oil, 25" x 30"



ಉದ್ಯಾನದ ಸ್ಮರಣೆ, ಮಾಧ್ಯಮ:ತೈಲವರ್ಣ, 34" x 40"

Impression of Garden, Medium:Oil, 34" x 40"

೧೯೭೩ರ ನಂತರ ಸಾರ್ವಜನಿಕವಾಗಿ ಹಲವು ಪ್ರಮುಖ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುತ್ತ ಬಂದಿರುವ ಸಿಂಧೂರರು ೧೯೯೭-೯೮ರಲ್ಲೂ ಸುತ್ತಲಿನ ಪ್ರಕೃತಿಯ ಲೆಕ್ಕವಿಲ್ಲದಷ್ಟು ವರ್ಣಛಾಯೆ, ರೂಪಗಳನ್ನು ಅನ್ವೇಷಿಸುತ್ತ ಕೆಲವೊಮ್ಮೆ ಅಮೂರ್ತವಾಗಿಯೂ ಅಭಿವ್ಯಕ್ತಿಸುತ್ತ ನಡೆದಿದ್ದರು.* ಪ್ರಕೃತಿ ಕಲಾವಿದರ ಮೊದಲ ಸ್ಫೂರ್ತಿ. ಅದನ್ನು ನಕಲು ಮಾಡುತ್ತ, ಅನುಸರಿಸುತ್ತ ಇಡುವ ಹೆಜ್ಜೆಗಳಲ್ಲಿ ಅಂತಿಮವಾಗಿ ತನ್ನನ್ನು ಕಂಡುಕೊಳ್ಳುವ ಕಲಾವಿದ ಇನ್ನೂ ಮುಂದೆ ಹೋಗಿ, ಪ್ರಕೃತಿಯನ್ನು ಪ್ರಶ್ನಿಸುವ, ಅದನ್ನು ತನ್ನ ಗ್ರಹಿಕೆ, ಅನುಭವಗಳ ಸೆಳಕುಗಳ ಲೇಪನದಿಂದ ವಿಭಿನ್ನವಾಗಿ ಕಾಣುವ, ಕೆಲವೊಮ್ಮೆ ತನ್ನದೇ ರೀತಿಯಲ್ಲಿ ಅಭಿವ್ಯಕ್ತಿಸಿ ಹೊಸರೂಪವನ್ನು ಸೃಷ್ಟಿಸುವ ದೃಷ್ಟಿ ಹೊಂದುತ್ತಾನೆ. ವಿ.ಜಿ.ಸಿಂಧೂರರು ಪ್ರಕೃತಿಯನ್ನು ಹಲವು ರೀತಿಗಳಲ್ಲಿ ನೋಡಿ, ಅನುಭವಿಸಿ ಅಭಿವ್ಯಕ್ತಿಸಿರುವವರು. ಪ್ರಕೃತಿ ಅವರಿಗೆ still life (ಸ್ಥಿತಜೀವ) ಇದ್ದಂತೆ!

ಕಲಾ ಇತಿಹಾಸ, ಅದರಲ್ಲೂ ಪಾಶ್ಚಿಮಾತ್ಯ ಕಲೆಯ ದಿಗ್ಗಜಗಳಾದ **ವ್ಯಾನ್‌ಗಾಗ್, ಸಾರ್ಜೆಂಟ್, ಡೇಗಾಸ್‌**ರವರ ಕಲಾಕೃತಿಗಳಲ್ಲಿನ ತಂತ್ರಗಳನ್ನು ಮೆಚ್ಚುವ ಸಿಂಧೂರರು ಸರ್. ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿದ್ದಾಗ **ಶಂಕರರಾವ್ ಪಲ್ಸೀಕರ್‌**ರವರ ಮಾರ್ಗದರ್ಶನದ ನಡುವೆ **ದಂಡಾವತಿ ಮಠ**ರವರ ನೂತನ ವಿದ್ಯಾಲಯದಲ್ಲೂ ಕಲೆಯ ವ್ಯಾಕರಣವನ್ನು ಕಲಿತರು. **ಜತಿನ್‌ದಾಸ್, ಕಾಮ್‌ಕರ್, ಪುಂಚಿತ್ತಾಯ**ರವರುಗಳ ಸ್ನೇಹ. ಇವರೊಂದಿಗೆ ಆಗಾಗ ಸಂಗೀತ, ನೃತ್ಯ ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು; ಚಲನಚಿತ್ರಗಳನ್ನೂ ನೋಡುತ್ತಿದ್ದರು. **ಸಿತಾರಾದೇವಿ, ಕಿಶನ್ ಮಹಾರಾಜ್‌**ರಂಥ ಕಲಾವಿದರು ಸಿಂಧೂರರ ಮನಸ್ಸಿನ ಕ್ಯಾನ್‌ವಾಸ್‌ನಲ್ಲಿ ಉಳಿದುಕೊಂಡಿದ್ದಾರೆ. ವಿಖ್ಯಾತ ಸಿತಾರ್ ವಾದಕ **ರವಿಶಂಕರ್‌**ರ ಮಗ **ಶುಬೋಧ್ ಶಂಕರ್** ಚಿತ್ರಕಲೆಯನ್ನು ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿದ್ದ ಸಂದರ್ಭ. ಪಲ್ಸೀಕರ್‌ರವರಿಂದ ಅಕ್ಷರ-ಭಾಷಾಜ್ಞಾನವೂ ಕಲಾವಿದನಿಗೆ ರೇಖೆ-ಬಣ್ಣ, ಮೈವಳಿಕೆ (texture) ತಂತ್ರಗಳಂತೆ ಬಹುಮುಖ್ಯ ಎಂಬುದನ್ನು ಸಿಂಧೂರರು ಕಲಿತರು. **ಗಾಯ್ ತೊಂಡೆ**ಯವರ ಅಮೂರ್ತ ಬಣ್ಣದ

ಆಟಗಳು, **ಅಲಮೇಲ್‌ಕರ್**‌ರ ರೇಖೆ, ಬಣ್ಣಗಳ ಅಲಂಕರಣವೂ ಆಕರ್ಷಿಸಿದ್ದು ಉಂಟು.

ಭಾವಚಿತ್ರಣದಲ್ಲಿ ಅಸಾಧಾರಣ ಸಾಧ್ಯತೆಗಳನ್ನು ಕಂಡುಕೊಂಡ ಸಿಂಧೂರ ನಮ್ಮ ನಡುವೆ ಖ್ಯಾತರೆನಿಸಿದ ಹಲವು ವ್ಯಕ್ತಿತ್ವಗಳನ್ನು ಕ್ಯಾನ್‌ವಾಸಿನ ಅವಕಾಶಕ್ಕೆ ಸಮರ್ಥವಾಗಿ ತಂದುಕೊಂಡಿದ್ದಾರೆ. ಗುರು ಪಲ್ಸೀಕರ್‌ರ ಮಾತಿನಂತೆ ಕಲೆಯ ವೃತ್ತಿಯನ್ನು ಆಶ್ರಯಿಸದೆ ಊರಿಗೆ ಹಿಂತಿರುಗಿ ಚಿತ್ರಿಸಲಾರಂಭಿಸಿದರು. ಗಡಿಬಿಡಿಯ ಮುಂಬಯಿಯ ವಿಕ್ಷಿಪ್ತತೆಯಿಂದ ಶಾಂತ, ಸರಳ ಸೌಂದರ್ಯದ, ಬಿಸಿ ಉಸಿರಾಡುವ ಹವೆಯ ವಾತಾವರಣದ ನಡುವೆಯೂ ಗ್ರಾಮ್ಯ ಮುಗ್ಧತೆಯನ್ನು ಅಪ್ಪಿಕೊಂಡ ಜಮಖಂಡಿಗೆ ಹಿಂತಿರುಗಿದಾಗ ಮರಳಿ ಮಣ್ಣಿಗೆ ಬಂದಂಥ ಅನುಭವ. ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯುನ್ನತ ಮಟ್ಟದ ಕುಟುಂಬದ ಸಿಂಧೂರ ತಮ್ಮ ದತ್ತಕ ತಂದೆ ಶ್ರೀ ಗಂಗಪ್ಪನವರ ಪ್ರೀತಿಯ ಶಾಂತ ಪರಿಸರದಲ್ಲಿ ಬೆಳೆದವರು.

ಮುಂಬಯಿಯ ನಂತರ ಜಮಖಂಡಿ ಸಿಂಧೂರರಿಗೆ ಅತ್ಯಂತ ಸುಮಧುರ ವಾತಾವರಣವನ್ನೇ ನೀಡಿದೆ. ಸಾಂಸ್ಕೃತಿಕವಾಗಿಯೇ ಅಲ್ಲದೆ, ರಾಜಕೀಯವಾಗಿಯೂ ಪ್ರಾಮುಖ್ಯತೆ ಪಡೆದ ಕುಟುಂಬ. ಕರಿಯ ನೆಲ-ಹೊಲ, ಸುತ್ತಲಿನ ಮರಗಿಡ ಪಕ್ಷಿಗಳ ಚಿಲಿಪಿಲಿ, ಕೋಗಿಲೆಗಳ ಕುಹೂ, ಪ್ರತಿದಿನ ಪೂರ್ವದಲ್ಲಿ ಕಾಣಿಸಿಕೊಂಡು ಪಶ್ಚಿಮದಲ್ಲಿ ಮರೆಯಾಗುವ ಉರಿಯುವ ಸೂರ್ಯ, ಬದಲಾಗುವ ಬಣ್ಣಗಳ ನೂರಾರು ಛಾಯೆಗಳು ಸಿಂಧೂರರ ಬಾಲ್ಯದ ಸಂವೇದನೆಗಳನ್ನು ಬಡಿದೆಬ್ಬಿಸಿದರೆ, ಜಮಖಂಡಿಯ ಪೂರ್ವದಿಂದ ದಕ್ಷಿಣಕ್ಕೆ ನೆಲವನ್ನು ಅಪ್ಪಿ ಮಲಗಿರುವ ರಾಮತೀರ್ಥ ಗುಡ್ಡದ ಸಂಪರ್ಕ, ಸಂಬಂಧ ಅವರ ಅಭಿವ್ಯಕ್ತಿಗೆ ಅಸಾಮಾನ್ಯ ಆಕಾಂಕ್ಷೆಗಳನ್ನು ನೀಡಿದೆ. ಪ್ರತಿ ಸಂಜೆ ಹಾಗೂ ಸಮಯ ಸಿಕ್ಕಾಗಲೆಲ್ಲಾ ಅಲ್ಲಿನ ಅಂಕು ಡೊಂಕು, **ಕೆ.ಕೆ. ಹೆಬ್ಬಾರ**ರ ರೇಖೆಗಳ ಲಯವನ್ನು ನೆನಪಿಸುವ ರಸ್ತೆಗಳಲ್ಲಿ ನಡೆಯುತ್ತ, ಏರುತಗ್ಗುಗಳಲ್ಲಿ ಹತ್ತಿ ಇಳಿಯುತ್ತ, ಇಳಿಜಾರುಗಳಲ್ಲಿ ಮಕ್ಕಳಂತೆ ಬಗ್ಗಿ ನಡೆಯುತ್ತ, ಮನ ಬಂದೆಡೆ ಕುಳಿತು ಧ್ಯಾನದಲ್ಲಿದ್ದಂತೆ ಸೂರ್ಯಾಸ್ತಮಾನ ಸಮಯವನ್ನು ಅನುಭವಿಸುವ, ಅಲ್ಲಿನ ಬಣ್ಣಗಳನ್ನು ಸುತ್ತಲಿನ ಪ್ರಕೃತಿಯ ಆ ಮೊದಲಿನ ಹಾಗೂ ಆ

ನಂತರದ ಬಣ್ಣಗಳೊಂದಿಗೆ ಹೋಲಿಸುತ್ತ, ಅವೆಲ್ಲದರ ನಿಗೂಢತೆಯನ್ನು ಮೆಲುಕು ಹಾಕುತ್ತಾ ಮನೆಯತ್ತ ಹೊರಡುವ ಸಿಂಧೂರರ ಮನಸ್ಥಿತಿಯಲ್ಲಿ ಮುಂದಿನ ಕಲಾಕೃತಿಯೊಂದರ ಸ್ಕೆಚ್ ಮೂಡಿರುತ್ತದೆ. ಈ ಎಲ್ಲದರ ನಡುವೆ ಮುಂಬಯಿಯ ಜೆ.ಜೆ. ಕಲಾಶಾಲೆಯ ರೊಮ್ಯಾಂಟಿಕ್ ಸಂವೇದನೆಗೆ ಪೂರಕವಾಗಿ ಅಕೆಡೆಮಿಕ್ ಕಲಿಕೆ ಕಾರಣದಿಂದ ಪ್ರಾರಂಭದ ಹಂತದಲ್ಲಿ ಪಶ್ಚಿಮದ ಕಲೆಯ, ಕಲಾವಿದರ ಪ್ರಭಾವ. ಆದರೆ ಸಿಂಧೂರರು ಅತ್ಯಂತ ತೀವ್ರವಾಗಿ ಚಿತ್ರಿಸಲಾರಂಭಿಸಿದ ೧೯೬೫ ಹಾಗೂ ೧೯೯೭ ರ ನಡುವೆ ಈ ಪ್ರಭಾವ ಹಲವು ಬದಲಾವಣೆಗಳಿಗೆ ಒಳಪಟ್ಟಿದೆ. ೧೯೬೦ರ ದಶಕದಲ್ಲಿ ನೈಜರೂಪ ಸಂಯೋಜನೆಗಳಿಗೆ ಇದ್ದ ಪ್ರಾಮುಖ್ಯತೆ ೧೯೯೭ರಲ್ಲಿಲ್ಲ. ಇಲ್ಲಿ ಪಶ್ಚಿಮದ ಮಾಧ್ಯಮ, ಶೈಲಿ, ರೂಪ, ತಂತ್ರ ಇತ್ಯಾದಿಗಳನ್ನು ನಮ್ಮ ನೆಲದ ಸೊಗಡಿಗೆ, ವಸ್ತುವಿಗೆ ಹೊಂದಿಸುವ ಪ್ರಯತ್ನಗಳು ನಡೆದವು. ೧೯೯೭ರಲ್ಲಿ ಇವೆಲ್ಲದರ ಸಮರಸದಂಥ ಅಭಿವ್ಯಕ್ತಿಗಳನ್ನು ನಾವು ಸಿಂಧೂರರಲ್ಲಿ ಕಾಣುತ್ತೇವೆ.

ಸಿಂಧೂರರ ಪ್ರಾರಂಭದ ಭಾವಚಿತ್ರ, ಸ್ಥಿತಜೀವ (still life)ಗಳಲ್ಲಿನ ನೆರಳು ಬೆಳಕಿನ ಆಟದ ನಡುವೆ ರೂಪಗಳನ್ನು, ರೂಪದರ್ಶಿಗಳನ್ನು ಪಶ್ಚಿಮದ ಕಲಾವಿದರ ಕಲಾ ಕೃತಿಗಳಲ್ಲಿನ ರೂಪದರ್ಶಿಗಳನ್ನು ಹೋಲುವವರನ್ನು ಹುಡುಕಿ, ವಿಭಿನ್ನ ಕೋನಗಳಲ್ಲಿ ಕೂರಿಸಿ, ಚಿತ್ರಿಸುವ, ಅವಕಾಶ (space)ದಲ್ಲಿ ಹೊಂದಿಸುವ, ಬಣ್ಣಗಳನ್ನು ಸಂಯೋಜಿಸುವ ರೀತಿಯಲ್ಲಿ ಜೆ.ಜೆ. ಕಲಾಶಾಲೆಯ ಕಲಿಕೆ ಅತ್ಯಂತ ಶಕ್ತಿಯುತವಾಗಿ ಕಾಣಿಸಿಕೊಂಡಿತು. ಇಲ್ಲೆಲ್ಲಾ ಅವರು ಕಲಾಕೃತಿಯ ಸೃಷ್ಟಿಗೆ ತಾವು ಕಲಿತ ತಾಂತ್ರಿಕ ಪರಿಣತಿಯನ್ನು ಧಾರೆಯೆರೆಯುವ ಪ್ರಯತ್ನಗಳನ್ನು ಮಾಡಿ ಯಶಸ್ಸು ಸಾಧಿಸಿರುವುದನ್ನು ಕಾಣುತ್ತೇವೆ. ಮದ್ಯದ ಬಾಟಲ್, ಬಿಳಿಯ ಪಿಂಗಾಣಿ ತಟ್ಟೆ, ಗಾಜಿನ ಲೋಟ ಹಾಗೂ ಸೇಬುಹಣ್ಣುಗಳನ್ನು ಚಿತ್ರಿಸಿಕೊಂಡಿರುವ ಸ್ಥಿತಜೀವವೊಂದರಲ್ಲಿ ಸೆಝಾನ್‌ನ ಕುಂಚದ ಬೀಸುಗಳ ನೆನಪು ಕಾಡಿದರೂ ಒಟ್ಟಾರೆ ಕಲಾಕೃತಿಯಾಗಿಸುವ ಸಿಂಧೂರರ ಕಲಾಸಾಮರ್ಥ್ಯ, ಕಲ್ಪನೆ, ತೈಲವರ್ಣ ಮಾಧ್ಯಮದ ನಿರ್ವಹಣೆ, ವರ್ಣಗಳ ಸಂಯೋಜನೆ ಇತ್ಯಾದಿಗಳು ಕಣ್ಣುಗಳಿಗೆ ಸಂತಸವನ್ನು ನೀಡುತ್ತವೆ. ಮಂದ ನೆರಳು ಬೆಳಕುಗಳನ್ನೂ ಅತ್ಯಂತ ಗಮನಾರ್ಹ ರೀತಿಯಲ್ಲಿ ಹಿಡಿದಿಟ್ಟಿದ್ದಾರೆ.

ಮತ್ತೊಂದು ಸ್ಥಿತ ಜೀವ (still life)ದಲ್ಲಿ ಹಲವು ಹಂತಗಳಲ್ಲಿ ಬಟ್ಟೆಯನ್ನು ಹೊದಿಸಿ ಸೇಬುಹಣ್ಣುಗಳನ್ನು ಅಲ್ಲಲ್ಲಿ ಇರಿಸಿ ಚಿತ್ರಿಸಿರುವ ಸಿಂಧೂರರು ಹಣ್ಣುಗಳ ಬಣ್ಣಗಳ ವೈವಿಧ್ಯ, ಹೊಳಪುಗಳನ್ನು ಅತ್ಯಂತ ನೈಜ ರೀತಿಯಲ್ಲಿ ಕುಂಚದ ಕುಶಲತೆಯಿಂದ ಚಿತ್ರಿಸಿದ್ದಾರೆ. ಕಲೆಯ ವ್ಯಾಕರಣ ಇಲ್ಲಿ ಯಶಸ್ವಿಯಾಗಿ ಅನುಸರಿಸಲ್ಪಟ್ಟಿದೆ. ನಮ್ಮ ಸಂದರ್ಭದ ಅತ್ಯುತ್ತಮ ಭಾವಚಿತ್ರಕಾರರಲ್ಲಿ ಒಬ್ಬರಾದ ಸಿಂಧೂರ ನೈಜತೆಯನ್ನು ಅನುಸರಿಸಿಯೂ ಚಿತ್ರಿತ ವ್ಯಕ್ತಿಗಳ ವಿಶಿಷ್ಟ ಹೊರರೂಪು, ವ್ಯಕ್ತಿತ್ವಗಳ ಜೊತೆಗೇ ಆ ವ್ಯಕ್ತಿಗಳ ಒಳನೋಟಗಳನ್ನು ಗ್ರಹಿಸಿ ನಮ್ಮ ಅನುಭವಕ್ಕೆ ದಕ್ಕುವಂತೆ ಚಿತ್ರಿಸುತ್ತಾರೆ. ಯಾವುದೇ ವ್ಯಕ್ತಿಯನ್ನು ಚಿತ್ರಿಸಿದರೂ ಆ ವ್ಯಕ್ತಿತ್ವದ ಗಾಂಭೀರ್ಯದ ಸೊಬಗನ್ನು, ವೀಕ್ಷಕರಿಗೂ ಉಣಬಡಿಸುತ್ತಾರೆ.

ಭಾರತೀಯ ಪರಂಪರೆಯ ಕೌಟುಂಬಿಕ ಜೀವನದ, ಧಾರ್ಮಿಕ ಶ್ರದ್ಧೆ, ಪೂಜೆಗಳಲ್ಲಿ ತಮ್ಮನ್ನು ನಿರ್ದಿಷ್ಟ ಸಮಯಗಳಲ್ಲಿ ತೊಡಗಿಸಿಕೊಳ್ಳುವ ಸಿಂಧೂರ ಕೆಲವೊಮ್ಮೆ ಸಂಗೀತದ ಧ್ವನಿಸುರುಳಿಗಳ ಗಾನಲಹರಿಯಲ್ಲಿ ಚಿತ್ರಿಸುವುದೂ ಉಂಟು. ‘‘ಸ್ವರ ಹಚ್ಚಿದರೆ ಸ್ವರ್ಗಕ್ಕೆ ಹೋಗುತ್ತೇನೆ’’ ಎಂದು ಖ್ಯಾತ ಗಾಯಕಿ ಗಂಗೂಬಾಯಿ ಹಾನಗಲ್ ಹೇಳಿದರೆ ‘‘ಬಣ್ಣ ಹಚ್ಚಿದರೆ ಸ್ವರ್ಗಕ್ಕೆ ಹೋಗುತ್ತೇನೆ’’ ಎಂದು ಹೇಳುವ ಸಿಂಧೂರರು ೭ ಬಣ್ಣಗಳನ್ನು ೭ ಸ್ವರಗಳಿಗೆ ಹೋಲಿಸುತ್ತಾರೆ. ಬಣ್ಣ-ಬಣ್ಣ-ಬಣ್ಣ ಹೀಗೆ ಬಣ್ಣದ ಹುಚ್ಚು ಹಿಡಿದಂತೆ ಚಿತ್ರಿಸುವ ಅವರು ‘‘ಆನಂದ ಕೊಡದ ಪೈಂಟಿಂಗ್‌ನಿಂದ ಏನು ಪ್ರಯೋಜನ’’ - ಎನ್ನುತ್ತಾರೆ. ವಿವರಣೆ ಅಪೇಕ್ಷಿಸುವ ಕಲಾಕೃತಿಗಳ ಸೃಷ್ಟಿ ಅನಗತ್ಯ ಎಂದೂ ಹೇಳುತ್ತಾರೆ.

ಬಣ್ಣಗಳ ಆಟಕ್ಕೆ ಪ್ರಾರಂಭದಿಂದಲೂ, ತೈಲವರ್ಣ ಮಾಧ್ಯಮದ ಬಗ್ಗೆಯೇ ಆಸಕ್ತಿ ಬೆಳೆಸಿಕೊಂಡ ಸಿಂಧೂರರು ೧೯೬೦ರಲ್ಲೂ ತೈಲವರ್ಣ ಗಳನ್ನು ಅತ್ಯಂತ ಆಸಕ್ತಿಯಿಂದ ದುಡಿಸಿಕೊಳ್ಳುತ್ತಿದ್ದರು. ತೈಲವರ್ಣಗಳನ್ನು ದುಡಿಸಿಕೊಳ್ಳುತ್ತಲೇ ‘‘Rough ಆದ ವಸ್ತು, ರೂಪಗಳನ್ನು Rough ಆಗಿಯೇ ಚಿತ್ರಿಸಬೇಕು’’ - ಎನ್ನುವ ಸಿಂಧೂರರು ಆ ಮಾಧ್ಯಮದ ಹಲವು ಸಾಧ್ಯತೆಗಳನ್ನು ಕಂಡು ಕೊಂಡಿರುವವರು. ಮೃದುವಾದ ಲೇಪನದ ನಡುವೆಯೂ ರೂಪಗಳ ವಿಕೃತಿಯನ್ನು (Distortion) ಎಲ್ಲಿ ಅಗತ್ಯವೆನ್ನಿಸುತ್ತದೆಯೋ ಅಲ್ಲಿ ಮಾಡಬೇಕು ಎಂದು ಅವರು ಅಭಿಪ್ರಾಯಿಸುತ್ತಾರೆ. ಅವರ ROCKS OF SRAVANA BELAGOLA ಕೃತಿ ಮಾಲೆಯೇ ಅಲ್ಲದೆ ಆ ನಂತರದ ಅವರ ಎಲ್ಲ ಭೂ-ದೃಶ್ಯಗಳು

ಹಾಗೂ ವಿಶಿಷ್ಟ ಸ್ಥಿತಜೀವಗಳಲ್ಲಿ ಈ ಅಂಶವನ್ನು ಗಮನಿಸಬಹುದು. ವಿಕೃತ ಸೌಂದರ್ಯದ ನಡುವೆ ಪ್ರಕೃತಿ ಇವರಿಂದ ಹಲವು ಹೊಸ ರೂಪಗಳಲ್ಲಿ ಕಾಣಿಸಿಕೊಂಡಿದೆ. LANDSCAPE ಕಲಾಪ್ರಕಾರವನ್ನು ತಮ್ಮ ವಿಶಿಷ್ಟ ಕೊಡುಗೆಯಿಂದ ಶ್ರೀಮಂತಗೊಳಿಸಿದ್ದಾರೆ. ವಿ.ಜಿ. ಸಿಂಧೂರರು ತಮ್ಮದೇ ಆದ identity ಯನ್ನು ಹೊಂದಿರುವುದು ವಿಕೃತಿಯನ್ನು (distortion) ದುಡಿಸಿಕೊಂಡಿರುವ ರೀತಿಯಿಂದ.

ಸಿಂಧೂರರ ಭಾವಚಿತ್ರಗಳಲ್ಲಿ ವಿಕೃತಿಯ ಹಾಜರಿಯಿಲ್ಲದಿರುವುದು ಗಮನಾರ್ಹ. ಆಳೆತ್ತರದ ಮಲ್ಲಿಕಾರ್ಜುನ ಮನ್ಸೂರರ ಭಾವಚಿತ್ರ ಪ್ರಸ್ತುತ ಧಾರವಾಡದ ಮಲ್ಲಿಕಾರ್ಜುನ ಮನ್ಸೂರ್ ಕಲಾಭವನದಲ್ಲಿದೆ. 'ಬಹದ್ದೂರ್ ತೋಡಿ' ರಾಗದ ಕ್ಯಾಸೆಟ್ ಆಲಿಸುತ್ತಾ ಆ ರಾಗದ ಭಾವಾನುಭವದ ದೃಷ್ಟಿಯಿಂದ ಮನ್ಸೂರರ ಭಾವವೈಭವವನ್ನು, ರಸಯಾತ್ರೆಯನ್ನು ಸಿಂಧೂರ ಚಿತ್ರಿಸಿದ್ದಾರೆ. ಬಾಳಿನ ಸಂಜೆಯಲ್ಲಿ ಅತ್ತಿತ್ತ ಸುಳಿದಾಡುತ್ತಿರುವ ಮನ್ಸೂರರು ಕೊಡೆ ಹಿಡಿದ ಪರಿಗೆ, ಗಾಳಿಗೆ ಕೋಟು ಕ್ಯಾನ್‌ವಾಸಿನಲ್ಲಿ ಹರಡಿದೆ. ಹಿನ್ನೆಲೆಯ ಭೂದೃಶ್ಯ ಸಿಂಧೂರರ ಶೈಲಿಯದು. ಸವಾಯಿ ಗಂಧರ್ವರು ಸ್ತ್ರೀವೇಷದಲ್ಲಿರುವ ಭಾವಚಿತ್ರಗಳನ್ನು ಆಧರಿಸಿ, ಅಕೆಡೆಮಿಕ್ ಶೈಲಿಯಲ್ಲಿ, ರವಿವರ್ಮನನ್ನು ನೆನಪಿಸುವಂತೆ ಚಿತ್ರಿಸಿದ್ದಾರೆ. ಗಂಗೂಬಾಯಿ ಹಾನಗಲ್ಲರ ಗಂಭೀರ ಮುಖಭಾವದ ಭಾವಚಿತ್ರಣವೂ ಸಿಂಧೂರರ ಕುಂಚದ ಕುಶಲತೆ, ಮನಸ್ಸಿನ ಪಕ್ವತೆಗೆ ಉದಾಹರಣೆಯಂತಿದೆ. ಹೀಗೆ ಭಾವಚಿತ್ರಣದ ವಿಧಾನದಲ್ಲಿ ಪರಿಣತರಾದ ಸಿಂಧೂರರ ೧೯೭೮ರ ಮುಂಬಯಿಯ ಅಪ್ನಾ ಉತ್ಸವ್‌ನಲ್ಲಿ Expert Artist Demonstrator ಆಗಿ ಆಹ್ವಾನಿಸಲ್ಪಟ್ಟು, ಖ್ಯಾತ ರಂಗಭೂಮಿಯ ಕಲಾವಿದ ದೇಶಪಾಂಡೆಯವರನ್ನು ಸೂತ್ರಧಾರನ ಉಡುಪಿನಲ್ಲಿ ಉತ್ತಮವಾಗಿ ಚಿತ್ರಿಸಿ ನೆರೆದಿದ್ದವರಿಗೆ ಹಾಗೂ ಸಂಘಟಕರಿಗೆ ಸಂತಸ ನೀಡಿದ್ದರು. ಒಮ್ಮೆ ನಾಗಪುರದ ಕೇಂದ್ರ ದಕ್ಷಿಣವಲಯ ಸಾಂಸ್ಕೃತಿಕ ಕೇಂದ್ರದ ಕಲಾ ಶಿಬಿರವೊಂದನ್ನು ನಿರ್ದೇಶಿಸಲು ನಾನು ಅಲ್ಲಿದ್ದ ೨೦ ದಿನಗಳ ಕಾಲವೂ ಅಲ್ಲಿಯೇ ಇದ್ದ ಈ ಕೃತಿ ನನ್ನ ಗಮನ ಸೆಳೆದದ್ದೇ ಅಲ್ಲದೆ ಅಲ್ಲಿ ಬರುತ್ತಿದ್ದ ಕಲಾಭಿಮಾನಿಗಳ ಕಣ್ಣುಗಳನ್ನೂ ಸೆಳೆಯುತ್ತಿದ್ದುದು ಸಹಜವೇ ಆಗಿತ್ತು. ಇವೆಲ್ಲ ಭಾವಚಿತ್ರಣಗಳ ಜೊತೆಜೊತೆಗೆ ಅವರಿಂದ ಸೃಷ್ಟಿಯಾದ ಹಲವಾರು ಭಾವಚಿತ್ರಗಳನ್ನು ಗಮನಿಸಿದಾಗ ವ್ಯಕ್ತಿಗಳನ್ನು ಚಿತ್ರಿಸುವಾಗ ಅವರು ರಿಯಲಿಸಂನ ವಕ್ತಾರರಂತೆ ಕಾಣುತ್ತಾರೆ. ಆದರೆ ಸುತ್ತಲಿನ ಪ್ರಕೃತಿಯ ಫಲಗಳಾಗಿರುವ ಚಿಟ್ಟೆ, ಹೂ ಇತ್ಯಾದಿಗಳು

ಸಿಂಧೂರರ ಕ್ಯಾನ್‌ವಾಸ್ ಅವಕಾಶಗಳಲ್ಲಿ ವಿಕೃತಿಯನ್ನು (Distortion) ಸುಂದರವಾಗಿ ದುಡಿಸಿಕೊಂಡಿವೆ. ವಿಕೃತ-ಸೌಂದರ್ಯದ ಕಾರಣದಿಂದಲೇ ಆ ರೂಪಗಳ ಸೌಂದರ್ಯ ಅಷ್ಟೇನೂ ಸಿಹಿಯಾದ ಬಣ್ಣಗಳಿಲ್ಲದೆಯೂ ಆಕರ್ಷಿಸುತ್ತದೆ. ಈ ಸುತ್ತಲಿನ ಪ್ರಕೃತಿ, ಪ್ರಕೃತಿಯ ಫಲಗಳಾದ ಜೀವ ಸಂಕುಲದ ಅಧ್ಯಯನ, ಅವುಗಳ ಕುರಿತ ಪ್ರೀತಿ, ಅವಲೋಕನಗಳ ಧ್ಯಾನದಂತೆ ಸಿಂಧೂರರ ರೂಪಗಳು ಮೂಡಿಬಂದಿವೆ.


೧೯೮೦ ರ ROCKS OF SRAVANA BELAGOLA ಕೃತಿಗಳು ಆ ಸಂದರ್ಭ ಹಾಗೂ ಇಂದಿನ ಸಂದರ್ಭದಲ್ಲೂ, ತಮ್ಮ ರೂಪ, ಕಲ್ಪನಾ ಸಾಮರ್ಥ್ಯ, ಮಿಶ್ರ ಮಾಧ್ಯಮವನ್ನು ದಶಕಗಳ ಹಿಂದೆಯೇ ದುಡಿಸಿಕೊಂಡ ಕಾರಣಗಳಿಂದ ವಿಭಿನ್ನವಾಗಿ ನಿಲ್ಲುತ್ತವೆ. ದೊಡ್ಡಪಾತ್ರೆಯ ನೀರಿನಲ್ಲಿ ಅಗತ್ಯವೆನ್ನಿಸಿದ ತೈಲ ವರ್ಣಗಳನ್ನು ಸ್ಪ್ರೇ ಮಾಡಿ ನೀರಿನ ಮೇಲ್ಮೈ ಅವಕಾಶದಲ್ಲಿ (space) ಉಂಟಾದ ಬಣ್ಣಗಳ ಮೈವಳಿಕೆ ಹಾಗೂ ಛಾಯೆಗಳನ್ನು ಕಾಗದಗಳ ಅವಕಾಶಗಳಲ್ಲಿ ಮೃದುವಾಗಿ ಒತ್ತಿ ಪ್ರಿಂಟ್ ಪಡೆದು ಅವನ್ನು ಪುನಃ ಚಿತ್ರಿಸಬೇಕೆಂದಿರುವ ಕ್ಯಾನ್‌ವಾಸ್ ಅವಕಾಶಗಳಲ್ಲಿ ಕೊಲಾಜ್ ಮಾಡಿ ನಿರ್ವಹಿಸಿಕೊಂಡಿರುವ ರೀತಿ ವಿಶಿಷ್ಟವಾದದ್ದು. ಶ್ರವಣಬೆಳಗೊಳದ ಬಂಡೆಗಳನ್ನು, ಆ ಸಂದರ್ಭದಲ್ಲಿ ಬಂಡೆಗಳನ್ನು ತಮ್ಮ ಅಭಿವ್ಯಕ್ತಿಯ ಆಳಕ್ಕೆ ತಂದುಕೊಂಡಿದ್ದ ಹಲವು ಕಲಾವಿದರಿಗಿಂತ ವಿಭಿನ್ನವಾಗಿ ಸಿಂಧೂರ ತಂದುಕೊಂಡಿದ್ದರು. ಈ ಕೃತಿಗಳಲ್ಲಿ ಗೊಮ್ಮಟನ ಛಾಯಾಚಿತ್ರಗಳನ್ನೂ ಸಹ ಕೊಲಾಜ್ ಮಾಡಿದ್ದದ್ದು ಪರಿಣಾಮಕಾರಿಯಾಗಿತ್ತು. ಶ್ರವಣಬೆಳಗೊಳದ ಬಂಡೆಗಳ ಮೇಲೆ ನಡೆದಾಡಿದ ಅನುಭವ ಅಭಿವ್ಯಕ್ತಗೊಂಡ ರೀತಿಯದು! ಅಲ್ಲಿನ ಬಂಡೆಗಳು ಕ್ಯಾನ್‌ವಾಸ್ ಅವಕಾಶ (space)ಗಳಿಗೆ ರೂಪಾಂತರಗೊಂಡ ಪ್ರಕ್ರಿಯೆ. ಸುತ್ತಲಿನ ವಸ್ತುಗಳನ್ನು ಕಲಾವಿದನೊಬ್ಬ ಕಲೆಯಾಗಿಸುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರದಂತೆ ಈ ROCKS OF SRAVANABELAGOLA ಕೃತಿಗಳು ಮೂಡಿವೆ. ಇಲ್ಲಿ ಬಾಲ್ಯದ ಸಂವೇದನೆಯೂ (child sensibility) ಸಾಕಷ್ಟು ಪ್ರಭಾವ ಬೀರಿದೆ.

ಗಣೇಶನ ಕುರಿತ ಹಲವಾರು ಕೃತಿಗಳು ಸಿಂಧೂರರಿಗಿರುವ ದೈವಿಕ ಕುತೂಹಲ, ಶ್ರದ್ಧೆಗಳನ್ನು ಬಿಂಬಿಸುತ್ತವೆ. BUTTERFLY ಹಾಗೂ NEW BUTTERFLY ಕೃತಿಗಳಲ್ಲಿ ಹೂವಿನ ಬಣ್ಣಗಳ ಆಕರ್ಷಣೆಗೆ ಹಾರಿ ಬರುವ,



" ಸೂರ್ಯಾಸ್ತ, ಸೂರ್ಯೋದಯಗಳ ಗ್ರಹಿಕೆಗಳು ", ಮಾಧ್ಯಮ: ತೈಲವರ್ಣ . 33" x 36"

"Perceptions of Sunset and Sunrise", Medium Oil. 33" x 36"



ಗಣಪತಿ, ಮಾಧ್ಯಮ:ತೈಲವರ್ಣ, 25" x 30"

Ganapathi, Medium:Oil, 25" x 30"



ನನ್ನೂರಿನ ಸ್ಥಳಗಳು, ಮಾಧ್ಯಮ: ತೈಲವರ್ಣ, 40" x 34"

Spots of My Home Town, Medium:Oil, 40" x 34"

(This Painting was Exhibitted 6th Triennale, Delhi.)

- ಆಕರ್ಷಣೆ, ಚಂಚಲತೆಗಳ ಚಿಟ್ಟೆಗಳ ರೂಪ ಮತ್ತು ಬಣ್ಣಗಳು ಪ್ರಕೃತಿಯ ಸೋಜಿಗಮಯ ಸುಕೋಮಲತೆಯನ್ನು ಅನುಭವಕ್ಕೆ ತರುವಂತೆ ಮೂಡಿಬಂದಿವೆ.

ಆಡುಗಳನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡು ಚಿತ್ರಿಸಿರುವ ಹಲವು ಕೃತಿಗಳಲ್ಲಿ ಆಡುಗಳ ರೂಪದ ಹಿನ್ನೆಲೆ ಮುನ್ನೆಲೆಗಳಲ್ಲಿನ ಗ್ರಾಮೀಣ ಪರಿಸರ, ಅಮೂರ್ತ ಬಣ್ಣದ ಬೀಸುಗಳ ನಡುವೆ ತನ್ನ ಆತ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಂಡಿದೆ. Abstract expressionistರ ಕುಂಚದ ಬೀಸುಗಳನ್ನು ನೆನಪಿಸುವ, ಗ್ರಾಮ್ಯ ಪರಿಸರದ ಅತ್ತಿತ್ತ ಅತ್ಯಂತ ಚಪ್ಪಟೆಯಾಗಿ ರಮ್ಯ ಭಾವ ಮೂಡುವಂತೆ ಬಣ್ಣಗಳನ್ನು ಲೇಪಿಸಲಾಗಿದೆ. ನೆಪಮಾತ್ರಕ್ಕಿರುವ ಸ್ಪಷ್ಟ ಮೇಕೆಗಳ ರೂಪದ ಅತ್ತಿತ್ತಲಿನ ಅಮೂರ್ತ ಪ್ರಕೃತಿ ಪರಿಸರವೇ ಮುಖ್ಯವಾಗುವುದೂ ಕುತೂಹಲಕಾರಿ. ಆದರೆ ಕಲೆಯನ್ನು ಸೃಷ್ಟಿಸುವ ಕಲಾವಿದನ ವಸ್ತುವಿನ ಆಯ್ಕೆಯ ಪ್ರಶ್ನೆ. ಯಾವುದಾದರೂ ಆಗಬಹುದು. ಇಂಥ ಆಯ್ಕೆ ನಡೆದು ಬಂದ ಹಾದಿಯನ್ನು ಕಲಾ ಇತಿಹಾಸದಲ್ಲಿ ಗಮನಿಸಿದರೆ ಜನರ ಉಪೇಕ್ಷೆಗೆ ಒಳಗಾದ ಹಲವು ಪ್ರಾಣಿ, ಪಕ್ಷಿಗಳನ್ನು ತಮ್ಮ ಕಲಾಕೃತಿಗಳಲ್ಲಿ ಸುಂದರವಾಗಿ ತಂದುಕೊಂಡಿರುವ ಅಪರೂಪದ ಹಲವರ ನಡುವೆ, ಸಿಂಧೂರರರೂ ಆಡುಗಳ ತಮ್ಮ ಕೃತಿಗಳಿಂದ ತಮ್ಮ ಹಾಜರಿಯನ್ನು ದಾಖಲಿಸಿದ್ದಾರೆ.

ಸಿಂಧೂರರು ಆಪ್ತತೆಯಿಂದ ಅಪ್ಪಿಕೊಂಡಿರುವ ಜಮಖಂಡಿಯ ತಮ್ಮ ಬದುಕಿಗೆ ನೆರಳು, ನಿದ್ರೆ, ನೆಮ್ಮದಿಗೆ ಆಸರೆಯಾಗಿರುವ, ವಾಸದ ಮನೆಯ ಒಳ-ಹೊರಗಿನ ಭಾಗಗಳ ಪ್ರತಿ ಇಂಚಿಂಚು ಸ್ಥಳವನ್ನೂ ಪ್ರೀತಿಸುವ ಅವರು ಅವೆಲ್ಲವುಗಳ ಹೊರರೂಪಗಳನ್ನೇ ಅಲ್ಲದೆ, ಅವುಗಳೊಳಗಿನ ಆತ್ಮೀಯ ಸಂಬಂಧಗಳನ್ನೂ ತಮ್ಮ SPOTS OF MY HOME TOWN ಕೃತಿಗಳಲ್ಲಿ ಬಿಂಬಿಸಿದ್ದಾರೆ. ಸಿಂಧೂರರ ಮನೆಯ ಮೊಗಸಾಲೆಯ ಮೆಟ್ಟಲುಗಳ ಬದಿಯ ಕುಂಡವೊಂದರಲ್ಲಿ ಬೊಗಸೆ ನೀರಿಗೆ ಹೂ ಬಿಟ್ಟು ತನ್ನ ಸೌಂದರ್ಯವನ್ನು, ಪ್ರಕೃತಿಯ ಜೀವಧ್ವನಿಯನ್ನು ಪ್ರದರ್ಶಿಸುತ್ತಿದ್ದ ಮುಳ್ಳುಗಿಡವೊಂದು ಪ್ರತಿದಿನ ನೀರು ಹಾಕಿ ಸಲಹುತ್ತಿದ್ದ ಸಿಂಧೂರರಿಗೆ ತನ್ನ ಮುಳ್ಳುಗಳ ಜೊತೆ ಸುಕೋಮಲ ಹೂವುಗಳನ್ನು, ಬಣ್ಣಗಳನ್ನು ಪ್ರದರ್ಶಿಸುತ್ತಿದ್ದ ರೀತಿಯಿಂದ ಅವರು ಅದನ್ನು ಚಿತ್ರಿಸಲೇಬೇಕಾದಂಥ

ಒತ್ತಡ, ಚಿತ್ರಿಸಿ ಆನಂದಿಸಿದರು. ಬಂಡಾಯ ಕವಿ **ರಂಜಾನ್ ದರ್ಗಾ** ಒಮ್ಮೆ ಈ ಕೃತಿಯನ್ನೂ ಗಿಡವನ್ನೂ ಅವರ ಮನೆಯಲ್ಲಿ ಕಂಡರು ಅವರಿಂದ ಅಕ್ಷರ ಕಾವ್ಯ ಹರಿಯಿತು:

ಮುಳ್ಳುಗಳೇ ಹೂವಾಗಿ ಬನ್ನಿ
ಮುಳ್ಳುಗಳೇ ಕನಸಾಗಿ ಬನ್ನಿ
ರಂಗುರಂಗಿನ ಪುಷ್ಪಗಳ ತನ್ನಿ

ಮನೆಯಂಗಳದಿ ಬೊಗಸೆ ನೀರಿಗೆ
ಅರಳಿ ನಿಲ್ಲುವ ಕಂಟಿಗಳೇ
ಮನದಂಗಳಕೆ ಬನ್ನಿ ನೆನಪಾಗಿ

ಒಂದು ಕ್ಷಣದ ಬದುಕಿಗಾಗಿ
ಜೀವ ಸ್ಪಂದಿಸುತ್ತಿದೆ ಬನ್ನಿ
ಮುಳ್ಳುಗಳೇ ಹೂವಾಗಿ ಬನ್ನಿ

ಅಕೆಡೆಮಿಕ್ ಕಲಾವ್ಯಾಕರಣ ಮೀರಿ ಸಿಂಧೂರರು MY HOMETOWN ಕೃತಿಗಳಲ್ಲಿ ರೂಪಗಳನ್ನು ಅವಕಾಶದಲ್ಲಿ ಸಂಯೋಜಿಸಿರುವ ರೀತಿ ವಿಭಿನ್ನವಾಗಿದೆ. ಗೋಡೆಯ ಅವಕಾಶದಲ್ಲಿ ಹಗ್ಗದ ಉದ್ದಕ್ಕೂ ಒಣಗಲು ಹಾಕಿದ ಬಟ್ಟೆಗಳ ಕೃತಿಯೊಂದರಲ್ಲಿನ ಬಾಗಿಲು, ಗೋಡೆಗಳು, ಬಟ್ಟೆಗಳ ರೂಪಗಳ ನಡುವಿನ ಪ್ರತ್ಯೇಕತೆ ತೋರುವ ಒಳಬಣ್ಣಗಳು, ಹೊರಬಣ್ಣಗಳನ್ನು ಸೀಳಿಕೊಂಡು ತಮ್ಮನ್ನು ನಮಗೆ ತೋರಿಸಿಕೊಳ್ಳುವ ಕಾತರ, ಸುಂದರ. ಈ ವಿಧಾನದ ರೇಖಾ ರೂಪಗಳ ನಡುವೆ expressionistರ ನಿರ್ವಹಣೆಯ ಬಣ್ಣ ಲೇಪಿಸಿಕೊಂಡು ಮೂಡಿಬಂದ ಹತ್ತು-ಹಲವು ಕೃತಿಗಳು ಈ ಕೃತಿಮಾಲೆಯಲ್ಲಿ ಮೂಡಿಬಂದಿವೆ. ಇಂಥ ವಿಶಿಷ್ಟ ರೇಖೆಗಳ ಪರಿ ಸಿಂಧೂರರ BATHING BEAUTY* ಕೃತಿಗಳಲ್ಲಿಯೂ. (೧೯೮೨-೮೩) ಹೆಚ್ಚು ಪರಿಣಾಮಕಾರಿಯಾಗಿ ಮೂಡಿದೆ. ಸ್ನಾನ ಮಾಡುತ್ತಿರುವ ನಗ್ನ ಹೆಣ್ಣುಗಳ ರೂಪಕಲ್ಪನೆ, ವಸ್ತುವಿನ ನಿರ್ವಹಣೆಯಲ್ಲಿ ಅನನ್ಯತೆಯನ್ನು ಸಾಧಿಸಲಾಗಿದೆ. ಸ್ಪಷ್ಟ ಅಸ್ಪಷ್ಟ ರೂಪ ರೇಖೆಗಳ ಆಟದಲ್ಲಿ ಅತ್ಯಂತ ಗಂಭೀರವಾಗಿ ಕಾಣಿಸಿಕೊಂಡಿರುವ ಸಿಂಧೂರರ ಸಂವೇದನೆ ಕಲೆಯಾಗಿ ಅರಳಿರುವ

* BATHING BEAUTY ಕೃತಿಗೆ ೧೯೮೩ರಲ್ಲಿ ರಾಷ್ಟ್ರೀಯ ಪುರಸ್ಕಾರ ದೊರೆತಿದೆ.


ರೀತಿ ಅನನ್ಯತೆಗೆ ಕಾರಣವಾಗಿದೆ. ಕ್ಯಾನ್‌ವಾಸ್ ಅವಕಾಶದಲ್ಲಿ (space) ಬೆಳ್ಳಿ, ಚಿನ್ನದ ಬಣ್ಣಗಳನ್ನು ಲೇಪಿಸಿ ನಂತರ ರೇಖೆ, ರೂಪಗಳನ್ನು ಕಂಡು ಕೊಂಡಿದ್ದಾರೆ. ಅಲ್ಲಲ್ಲಿ ಕುಂಚವನ್ನು ಆಡಿಸಿ, ಬೀಸಿ, ಕಣ್ಣಿಗೆ ಹಿತವಾದ ಹಸಿರು ಕಂದು, ಸ್ವಲ್ಪವೇ ಬಿಳುಪು ಬಣ್ಣಗಳ ಪರಸ್ಪರ ಮುಖಾಮುಖಿಯಲ್ಲಿ ಬೆತ್ತಲೆ (nakedness) ರೂಪ ಹೇಗೆ ಕಲೆಯಾಗಿ ಅರಳಿ ನಗ್ನ (nudity) ರೂಪವಾಗಿ ಸೌಂದರ್ಯದ ಅನುಭವ ನೀಡಬಲ್ಲದೆಂಬುದಕ್ಕೆ ಈ ಕೃತಿಗಳು ಉತ್ತಮ ಉದಾಹರಣೆಗಳಂತಿವೆ. ಇಲ್ಲಿ ಗ್ರಾಮೀಣ ಮಣ್ಣಿನ ಸೊಗಡಿನ ಸೊಬಗನ್ನು ವೈಭವೀಕರಿಸಲಾಗಿದೆ.

ಪ್ರಾರಂಭದಿಂದ ಇಂದಿನವರೆವಿಗೂ ರೊಮ್ಯಾಂಟಿಕ್ ಸಂವೇದನೆಯ ಸಿಂಧೂರರು ಬಾದಾಮಿ, ಐಹೊಳೆ, ಪಟ್ಟದಕಲ್ಲು ಉಬ್ಬು ಶಿಲ್ಪಗಳ ರೇಖಾಲಾಲಿತ್ಯ ಮತ್ತು ಅವುಗಳ ಬೃಹತ್ ರೂಪಗಳನ್ನು ೧೯೯೨ರಲ್ಲಿ ತಮ್ಮ ಕ್ಯಾನ್‌ವಾಸಿನ ಅವಕಾಶ (space)ಗಳಲ್ಲಿ ಸಂಯೋಜಿಸಿದ್ದಾರೆ. ತ್ರಿವಿಕ್ರಮ, ನಟರಾಜ, ಮೊದಲಾದ ರೂಪಗಳನ್ನು ಸಿಂಧೂರರ ಕೃತಿಗಳಲ್ಲಿ ಗಮನಿಸಿದಾಗ ಇಡೀ ಅವಕಾಶದಲ್ಲಿ ರೂಪಗಳನ್ನು ಹರಡಿ ಅವುಗಳ ಬೃಹದತೆ ಮತ್ತು ಭವ್ಯತೆಗಳನ್ನು ಮೆರೆದಿದ್ದಾರೆ. ಈ ಕೃತಿಗಳಿಗೆ, ರೇಖೆಗಳಿಗೆ ವಿಶಿಷ್ಟ ಪ್ರಾಧಾನ್ಯತೆ ನೀಡಲಾಗಿದೆ. ಬಾದಾಮಿ ಚಾಲುಕ್ಯರ ಶಿಲ್ಪಿಗಳ ಮೂಲ ರೇಖಾಚಿತ್ರಗಳನ್ನು ಪುನರ್‌ರೂಪಿಸಿ ಅವಕ್ಕೆ ಸಮಕಾಲೀನ ಲೇಪವನ್ನು ತಮ್ಮ ತೈಲ ವರ್ಣಗಳಿಂದ ಸಿಂಧೂರ ನೀಡಿದ್ದಾರೆ. ಹೀಗೆ ಮಾಡಿ ಈ ವಿಖ್ಯಾತ ಶಿಲ್ಪಗಳ ಸೌಂದರ್ಯದ ಕಾಡುವಿಕೆಯಿಂದ ಬಿಡುಗಡೆ ಪಡೆದಿದ್ದಾರೆ.

''ಮರದ ಗುಂಪಿನಲ್ಲಿ ನಿಂತು ನಾನೇ ಮರವಾಗಿ ಆನಂದಿಸುತ್ತೇನೆ'' - ಎನ್ನುವ ಸಿಂಧೂರ ೧೯೯೭ರಲ್ಲಿ ತಮ್ಮ ರೊಮ್ಯಾಂಟಿಕ್ ಸಂವೇದನೆಯ ಭಾವಧಾರೆಯನ್ನು ಹಲವು ಕೃತಿಗಳಲ್ಲಿ ಧಾರೆಯೆರೆದಿದ್ದಾರೆ. ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಕುರಿತು ಚಿತ್ರಿಸಿರುವ ಕೃತಿಗಳಲ್ಲಿನ ಅವರ ಆಶಯ ಪುನಃ ಪ್ರಕೃತಿ ಪ್ರೇಮವೇ ಆಗಿದೆ. ಬಣ್ಣಗಳ ಬೆಡಗಿಗೆ ಮೂಲ ಕಾರಣನಾಗಿರುವ ಸೂರ್ಯ ಪೂರ್ವ ಹಾಗೂ ಪಶ್ಚಿಮಗಳಲ್ಲಿ ಕಾಣುವ ರೀತಿಯಲ್ಲಿ ಬದಲಾಗುವ ಬಣ್ಣಗಳ ಮಾಯಾಜಾಲ, ಪ್ರಕೃತಿ, ನೆಲ-ನೀರು, ಗಿಡ ಮರ ಹಕ್ಕಿಗಳ ಬಣ್ಣ, ಬೆಳಕು-ನೆರಳು, ಆ ಮೂಲಕ ಮೂಡುವ

ರೇಖೆ-ರೂಪಗಳು ಇವೆಲ್ಲ ಸಿಂಧೂರರನ್ನು ಕಾಡಿದ ರೀತಿ ಕ್ಯಾನ್‌ವಾಸಿನ ಅವಕಾಶದಲ್ಲಿ ಕಂಡುಕೊಂಡ ರೀತಿ ಪ್ರಕೃತಿಯ ಜೀವಧ್ವನಿಯನ್ನೇ ಅನುಭವಕ್ಕೆ ತರುವಂಥದ್ದು. ಪ್ರಕೃತಿಯ ರೂಪ-ಬಣ್ಣಗಳು ಕ್ಯಾನ್‌ವಾಸಿನ ಅವಕಾಶ (space)ಗಳಲ್ಲಿ ಪಡೆದ ರೂಪಾಂತರ, ಬಣ್ಣಗಳ ಛಾಯಾಂತರಗಳ ಹಲವು ನೋಟಗಳು **IMPRESSIONS OF SUNRISE AND SUNSET** ಕೃತಿ ಸಂಕುಲವಾಗಿ ವೀಕ್ಷಕರಿಗೆ ಹಲವು ಆಯಾಮಗಳ ಅನುಭವಗಳನ್ನು ನೀಡಬಲ್ಲವಾಗಿವೆ. ಪ್ರಕೃತಿಯ ಬಣ್ಣ-ಬೆಡಗು-ಬಿನ್ನಾಣಗಳ ಹಲವು ಮುಖಗಳ ಹೊರ ಮತ್ತು ಒಳನೋಟಗಳ ಈ ಕೃತಿಗಳಲ್ಲಿ ರೊಮ್ಯಾಂಟಿಕ್ ಭಾವವೈಭವದ ನಡುವೆಯೂ ಕೆಲವು ಬಣ್ಣ ಪ್ರಾಮುಖ್ಯತೆ ಪಡೆದ ಹಲವು ಕೃತಿಗಳೂ ಮೂಡಿಬಂದಿವೆ. ಅಂಥ ಕೃತಿಯೊಂದರಲ್ಲಿ ಮುಳುಗುತ್ತಿರುವ ಸೂರ್ಯನ ರೋಮಾಂಚಗೊಳಿಸುವ ಅಮೂರ್ತ ದೃಶ್ಯ ಸಂಯೋಜನೆಯಿದೆ. ಸೂರ್ಯನ ಮುಂಜಾನೆಯ ಮತ್ತು ಸಂಜೆಯ ಬಣ್ಣಗಳು, ಆಗಸ ಮತ್ತು ಸುತ್ತಲಿನ ಪ್ರಕೃತಿಯಲ್ಲಿ ಆ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ವೈವಿಧ್ಯಮಯ ಬಣ್ಣಗಳ ಛಾಯೆಗಳು, ಕಲಾಕೃತಿ ಸೃಷ್ಟಿಯಾಗುವ ಸಮಯದ ಆನಂದವನ್ನು ನೀಡುವಂತಿವೆ. ಕೆಂಪು, ಕಪ್ಪು, ಕಂದು, ಬಿಳುಪು, ಕೇಸರಿಗಳು ಒಂದರಲ್ಲಿ, ಮತ್ತೊಂದರಲ್ಲಿ ಹಸಿರು, ನೀಲಿ, ಬಿಳುಪು, ಕೆಂಪು, ಕಂದು, ಹಾಗೂ ಕೇಸರಿಗಳ ಸಂಯೋಜನೆ, ಪ್ರಕೃತಿಯ ಶಾಂತ ಸುಂದರ ಅನುಭವ ನೀಡುತ್ತವೆ.

ಈ ಕೃತಿ ಮಾಲೆಯ ಕೆಲವು ಕೃತಿಗಳಲ್ಲಿ ಪ್ರಕೃತಿಯು ಅಮೂರ್ತದೃಶ್ಯವಾಗಿ ರೂಪುಗೊಂಡಿದ್ದು ಸೂರ್ಯನ ಬಿಂಬ ಪ್ರತಿಬಿಂಬಿತ ವಾಗಿರುವ ಅಸ್ಪಷ್ಟತೆ ಸುಂದರ. ತಮ್ಮ ಹುಟ್ಟು ನೆಲದ ಬಗೆಗಿನ ಸಿಂಧೂರರ ಅನಂತ ಪ್ರೀತಿ ಇಂಥ ಸೌಂದರ್ಯ ಸೃಷ್ಟಿಗೆ ಕಾರಣವಾಗಿದೆ. ಈ ಕಾರಣದಿಂದ ಒಬ್ಬನೇ ಸೂರ್ಯನ ಹಲವು ಮುಖ, ಸಂದರ್ಭಗಳನ್ನು ಅವರು ಕಂಡಿರುವ ರೀತಿ ಅಪೂರ್ವವಾಗಿದೆ. ಈ ಕೃತಿಗಳಲ್ಲಿ ಅವರ ಊರಿನ ಸುತ್ತಮುತ್ತ ಕಾಣುವ ಮಣ್ಣು, ಇಟ್ಟಿಗೆ, ಒಣ ಎಲೆಗಳೂ ಕಂದು ಬಣ್ಣವನ್ನು ಲೇಪಿಸಿಕೊಂಡಿವೆ. ಇಂಪ್ರೆಷನಿಸ್ಟ್ ಮತ್ತು ಅಮೂರ್ತ ಎಕ್ಸ್‌ಪ್ರೆಷನಿಸ್ಟ್ ಕಲಾವಿದರು ಬಣ್ಣಗಳನ್ನು ನಿರ್ವಹಿಸಿಕೊಂಡ ನೆನಪುಗಳೂ ಸಿಂಧೂರರ ಈ ಮಾಲೆಯ ಒಂದೆರಡು ಕೃತಿಗಳಲ್ಲಿ ಬಂದು ಹೋಗುತ್ತವೆ.




ಭಾವಚಿತ್ರ, ಮಾಧ್ಯಮ:ತೈಲವರ್ಣ, 6" x 10"   Portrait, Medium: Oil, 6" x 10"



ನಮ್ಮೂರಿನ ಸ್ಥಳಗಳು, ಮಾಧ್ಯಮ:ತೈಲವರ್ಣ. 33" x 40"   Spots of my home town. Medium Oil. 33" x 40"



ಕಲಾವಿದರ ತಂದೆ, ಮಾಧ್ಯಮ:ತೈಲವರ್ಣ Father of the Artist, Medium:Oil



ಸ್ಥಿತಜೀವ, ಮಾಧ್ಯಮ:ತೈಲವರ್ಣ, 18" x 21" Still Life, Medium:Oil 18" x 21"

ಆದರೆ ಈ ಕೃತಿಗಳ ಜೀವಧ್ವನಿ ಸಿಂಧೂರರ ಸುಂದರ ಬದುಕಿನ ಸುಂದರ ಸಂವೇದನೆಯಿಂದ ಶಕ್ತಿಯನ್ನು ಪಡೆದುಕೊಂಡಿದೆ ಎಂಬುದು ಮುಖ್ಯವಾಗುತ್ತದೆ. ಈ ಮೊದಲೇ ಹೇಳಿರುವಂತೆ ಸೂರ್ಯ ಹಾಗೂ ಪರಿಸರದ ನಡುವಿನ ಆಲಿಂಗನದ ಅನಂತ ಆಟದ ವೈವಿಧ್ಯಮಯ ಪ್ರಕ್ರಿಯೆಯಲ್ಲಿ ಸೂರ್ಯನ ಶಾಖ-ಬೆಳಕುಗಳಿಗೆ ಸ್ಪಂದಿಸಿ, ಅವಲಂಬಿಸಿ, ಅಸಂಖ್ಯಾತ ಬಣ್ಣ-ಛಾಯೆಗಳನ್ನು ಪಡೆದುಕೊಳ್ಳುವ ಪ್ರಕೃತಿ ಸೂರ್ಯನಿಗೆ ಋಣಿ. ಈ ಬಣ್ಣ, ಬೆಡಗುಗಳ ಧ್ಯಾನದಲ್ಲಿ ಅವುಗಳ ಅಲೌಕಿಕ, ಆನಂದಮಯ ಅನುಭವವನ್ನು ತಮ್ಮದಾಗಿಸಿಕೊಂಡು ಸಿಂಧೂರರು ಅಭಿವ್ಯಕ್ತಿಸಿದ್ದಾರೆ. ಪ್ರಖರ ಬೆಳಕಿನ ಬಣ್ಣಗಳ ಜೊತೆಗೆ, ಅಂದರೆ ನೋಡುವ ಸಾಮಾನ್ಯ ಕಣ್ಣುಗಳನ್ನೇ ಅಲ್ಲದೆ ಸಂವೇದನಾಶೀಲ, ಅಸಾಮಾನ್ಯ ಕಣ್ಣುಗಳ ಗಮನವನ್ನು ಸೆಳೆಯುವ ಕಪ್ಪು, ಕಂದು, ತಿಳಿ ನೇರಳೆ, ಬಣ್ಣಗಳ ಸಂಯೋಜನೆಯೂ ಮೂಡಿಬಂದಿದೆ. ಇಂಥ ಕೃತಿಯೊಂದರಲ್ಲಿ ಕಪ್ಪು ಬಣ್ಣದ ವೈಭವೀಕರಣವೂ ಇದೆ! ಸೂರ್ಯ ಹಾಗೂ ಅವನನ್ನು ಅವಲಂಬಿಸಿದ ಸಸ್ಯಗಳ ಉಸಿರಾಟವೂ ಕೆಲವು ಕೃತಿಗಳಲ್ಲಿ ಅನುಭವಕ್ಕೆ ಬರುವಂತೆಯೂ ಸಿಂಧೂರರು ಸೃಷ್ಟಿಸಿದ್ದಾರೆ. ಇಂಥ ಕೃತಿಯೊಂದರ ಬಿಳಿಯ ಬಣ್ಣದ ಛಾಯಾಂತರಗಳ ವೈವಿಧ್ಯ ಸುಂದರ; ಕುತೂಹಲಕಾರಿ.

ಮುಂಬೈನ Times of India ಪತ್ರಿಕೆಯ ಖ್ಯಾತ ಕಲಾವಿಮರ್ಶಕ **ಶ್ರೀ ಜ್ಞಾನೇಶ್ವರ ನಾಡಕರ್ಣಿ** ಮತ್ತು Financial Express, The Mid Day, The Daily ಹಾಗೂ ಇತರ ಪ್ರಾದೇಶಿಕ ಪತ್ರಿಕೆಗಳ ಕಲಾವಿಮರ್ಶಕರು ಹೇಳುವಂತೆ - ''ಶ್ರೀ ಸಿಂಧೂರರು ಗ್ರಾಮೀಣ ಪ್ರದೇಶದ ಪರಿಶುದ್ಧ ವಾತಾವರಣದಲ್ಲಿದ್ದುಕೊಂಡು, 'ತನ್ನತನ'ವನ್ನು ಉಳಿಸಿಕೊಂಡು ನೋಡುಗರ ಮನಸ್ಸಿನ ಮೇಲೆ ''ಸಿಂಧೂರ ಶೈಲಿ''ಯ ಆಳವಾದ ಪ್ರಭಾವ ಬೀರುತ್ತಾರೆ. ವಿಷಯಕ್ಕನುಗುಣವಾದ ಮೋಹಕ ಹಾಗು ಪ್ರಸನ್ನ ವರ್ಣಗಳು ನೋಡುಗರನ್ನು ಸ್ವರ್ಗೀಯ ಆನಂದದೆಡೆ ಸೆಳೆದೊಯ್ಯುತ್ತವೆ.'' ಹೀಗೆ ಪ್ರಕೃತಿಯನ್ನು ಪ್ರೀತಿಸುತ್ತ ಕಲಾಸೃಷ್ಟಿಯಲ್ಲಿ ತೊಡಗಿರುವ ಸಿಂಧೂರರ ಸೌಂದರ್ಯದ ಅನ್ವೇಷಣೆ ನಿರಂತರವಾದುದು.

●

ಎ.ಜಿ. ಸಿಂಧೂರರ ಸಂಕ್ಷಿಪ್ತ ಪರಿಚಯ

ಜೀವನ, ಶಿಕ್ಷಣ

೧೯೪೦ ಜನನ: ಬನಹಟ್ಟಿ, ಬಿಜಾಪುರ ಜಿಲ್ಲೆ, ಕರ್ನಾಟಕ. (೭.೬.೧೯೪೦)

೧೯೬೪ ಜಿ.ಡಿ. ಆರ್ಟ್, ಜೆ.ಜೆ. ಕಲಾಶಾಲೆ, ಮುಂಬಯಿ.

೧೯೬೫ ಭಿತ್ತಿಚಿತ್ರ ರಚನೆಯ ಅಧ್ಯಯನ: ಜೆ.ಜೆ. ಕಲಾಶಾಲೆಯಲ್ಲಿ ಶಿಷ್ಯವೇತನದ ನೆರವಿನಿಂದ.
ಕರ್ನಾಟಕ ಲಲಿತಕಲಾ ಅಕಾಡೆಮಿ ಹಾಗೂ ಮದರಾಸಿನ ಕೇಂದ್ರ ಲಲಿತಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರದ ಸದಸ್ಯರಾಗಿ ಸೇವೆ.

ಕಲಾಪ್ರದರ್ಶನಗಳು

ಏಕವ್ಯಕ್ತಿ ಕಲಾ ಪ್ರದರ್ಶನಗಳು

೧೯೭೩ ಬೆಂಗಳೂರಿನ ಮ್ಯಾಕ್ಸ್‌ಮುಲ್ಲರ್ ಭವನದಲ್ಲಿ, ಕರ್ನಾಟಕ ಲಲಿತ ಕಲಾ ಅಕಾಡೆಮಿಯ ಆಶ್ರಯದಲ್ಲಿ.

೧೯೭೬ ತಾಜ್ ಆರ್ಟ್ ಗ್ಯಾಲರಿ, ಮುಂಬಯಿ

೧೯೭೫-೭೬ ಮತ್ತು
೧೯೭೯, ೧೯೮೨
೧೯೮೫, ೧೯೯೦
೧೯೯೩, ೧೯೯೭] ಜಹಾಂಗೀರ್ ಆರ್ಟ್ ಗ್ಯಾಲರಿ ಮುಂಬಯಿ

೧೯೯೭ ಇಮೇಜಸ್ ಆರ್ಟ್ ಗ್ಯಾಲರಿ ಬೆಂಗಳೂರು

೧೯೭೮ ಜಮಖಂಡಿ, ಕರ್ನಾಟಕ. ಕರ್ನಾಟಕ ಲಲಿತ ಕಲಾ ಅಕಾಡೆಮಿ ನೆರವು

೧೯೮೫ ಬಿಜಾಪುರ, ಬಿಜಾಪುರ ಪೊಲೀಸ್ ಸೂಪರಿನ್‌ಟೆನ್‌ಡೆಂಟ್‌ರವರ ಕಛೇರಿ ಆಶ್ರಯದಲ್ಲಿ

೧೯೮೩ ಜಮಖಂಡಿ: ಜಮಖಂಡಿಯ ರೋಟರಿ ಕ್ಲಬ್ ನೆರವು

೧೯೮೦ ಹೈದರಾಬಾದಿನ ಕಲಾಭವನ, ಹೈದರಾಬಾದು ಎ.ಪಿ. ಆರ್ಟ್ ಕೌನ್ಸಿಲ್ ನೆರವು

ಗುಂಪಿನ ಕಲಾಪ್ರದರ್ಶನಗಳು

೧೯೧೮ ಇಬ್ಬರು ಕಲಾವಿದರ ಕಲಾಪ್ರದರ್ಶನ ಶ್ರೀಧರಾಣಿ ಆರ್ಟ್ ಗ್ಯಾಲರಿ, ನವದೆಹಲಿ

೧೯೬೫-೧೯೮೬ ಅಖಿಲಭಾರತ ಕಲಾ ಪ್ರದರ್ಶನಗಳು ಮುಂಬಯಿ, ಕಲ್ಕತ್ತ, ಬೆಂಗಳೂರು, ಚನ್ನೈ, ಹೈದರಾಬಾದು, ನವದೆಹಲಿ, 6ನೆಯ ಟ್ರೈ-ನಾಲೆಇಂಡಿಯಾ ಅಂತಾರಾಷ್ಟ್ರೀಯ ಕಲಾಪ್ರದರ್ಶನ, ನವದೆಹಲಿ

೧೯೮೦-೧೯೮೯ ಕೇಂದ್ರ ಲಲಿತ ಕಲಾ ಅಕೆಡೆಮಿ ನವದೆಹಲಿ, ರಾಷ್ಟ್ರೀಯ ಕಲಾ ಪ್ರದರ್ಶನ.

೧೯೮೬ ಭೂಪಾಲ್: ಭಾರತಭವನ, ಸಮಕಾಲೀನ ಭಾರತೀಯ ಕಲೆಯ ಬೈ ನಾಲೆ

೧೯೮೭ ಪ್ಯಾರೀಸ್ ARTISTES INDIENS ಕಲಾಪ್ರದರ್ಶನ

೧೯೯೩ ಬೆಂಗಳೂರು SAARC ರಾಷ್ಟ್ರಗಳ MASTERS OF CONTEMPORARY ART ಪ್ರದರ್ಶನ

ಭಾಗವಹಿಸಿರುವ ಕಲಾಶಿಬಿರಗಳು

೧೯೭೯ ಕೇಂದ್ರ ಲಲಿತಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರ, ಚನ್ನೈ ಆಶ್ರಯದಲ್ಲಿ ಹೈದರಾಬಾದಿನಲ್ಲಿ ವ್ಯವಸ್ಥೆಯಾಗಿದ್ದ ಕಲಾಶಿಬಿರ

೧೯೮೦,೮೧,೮೨ ಕಲಾಶಿಬಿರ, ಬೆಂಗಳೂರು, ಧಾರವಾಡ ಮತ್ತು ಕಲ್ಬುರ್ಗಿಗಳಲ್ಲಿ ರಾಜ್ಯಲಲಿತ ಕಲಾ ಅಕಾಡೆಮಿಯ ಆಶ್ರಯದಲ್ಲಿ

೧೯೮೯ ಮೈಸೂರು ದಸರಾ ಕಲಾಪ್ರದರ್ಶನ, ಕರ್ನಾಟಕ ರಾಜ್ಯಲಲಿತ ಕಲಾ ಅಕಾಡೆಮಿಯ ವಾರ್ಷಿಕ ಕಲಾಪ್ರದರ್ಶನ, ನಾಗಪುರದ ದಕ್ಷಿಣ ಕೇಂದ್ರ ವಲಯದ ಕಲಾಪ್ರದರ್ಶನ, ಕಲ್ಬುರ್ಗಿ ವಿಶ್ವವಿದ್ಯಾಲಯದ ಕಲಾಪ್ರದರ್ಶನ, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಖಿಲ ಭಾರತ ಕಲಾಪ್ರದರ್ಶನಗಳ ಆಯ್ಕೆಗಾರರಾಗಿಯೂ ಸೇವೆ ಸಲ್ಲಿಸಿದ್ದಾರೆ.

೧೯೮೫ ವಿಶ್ವಕನ್ನಡ ಸಮ್ಮೇಳನ, ಮೈಸೂರು

೧೯೮೬ SAARC ಕಲಾವಿದರ ಕಲಾಶಿಬಿರ, ಬೆಂಗಳೂರು

೧೯೮೯ 'ಅಪ್ನಾ ಉತ್ಸವ್' ಮುಂಬಯಿ

೧೯೮೭ ಕಲಾವಿದರ ಶಿಬಿರ: ಚನ್ನೈ ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರ, ಮದರಾಸು

ಪ್ರಶಸ್ತಿಗಳು

೧೯೬೫-೬೭ ಬಾಂಬೆ ಆರ್ಟ್ ಸೊಸೈಟಿ 'ಭಾವಚಿತ್ರ' ಪ್ರಕಾರಕ್ಕಾಗಿ ನೀಡುವ ಪ್ರಶಸ್ತಿ

೧೯೬೭ ಪಟೇಲ್ ಟ್ರೋಫಿ ಆರ್ಟ್ ಸೊಸಾಯಿಟಿ ಆಫ್ ಇಂಡಿಯಾ, ಮುಂಬೈ

೧೯೮೩ ಕೇಂದ್ರ ಲಲಿತಕಲಾ ಅಕಾಡೆಮಿಯ ರಾಷ್ಟ್ರೀಯ ಪ್ರಶಸ್ತಿ

೧೯೭೭-೭೮ ಅಖಿಲ ಭಾರತ ಕಲಾಪ್ರದರ್ಶನ: ಕಲ್ಕತ್ತ ಪ್ರಶಸ್ತಿ

೧೯೮೫ ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯ ಪ್ರಶಸ್ತಿ

೧೯೯೧ ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಇನ್ನೂ ಹಲವಾರು ಪ್ರಶಸ್ತಿ ಗೌರವಗಳು

ಕಲಾಕೃತಿಗಳ ಸಂಗ್ರಾಹಕರು

ಆರ್ಟ್ ಸೊಸೈಟಿ ಆಫ್ ಇಂಡಿಯಾ, ಮುಂಬಯಿ
ಅಭಿನವ ಕಲಾವಿದ್ಯಾಲಯ, ಪೂನಾ
ಮುಂಬಯಿಯ ಟಾಟಾ ಗುಂಪಿನ ಹಾಗೂ ಎಸ್.ಕೆ. ಗುಂಪಿನ ಕಂಪನಿಗಳು
ಸರ್ಕಾರದ ವಸ್ತು ಸಂಗ್ರಹಾಲಯ, ಬೆಂಗಳೂರು
ಬಿ.ಎಲ್.ಡಿ. ಮೆಡಿಕಲ್ ಕಾಲೇಜ್, ಬಿಜಾಪುರ

ಬಸವೇಶ್ವರ ಇಂಜನಿಯರಿಂಗ್ ಕಾಲೇಜ್, ಬಾಗಲಕೋಟೆ

ಸೋಮಯ್ಯ ಸಕ್ಕರೆ ಕಾರ್ಖಾನೆ, ಸಮೀರ್‌ವಾಡಿ
ಹರ್‍ಯಾಣ ರಾಜ್ಯ ಸರ್ಕಾರದ ಸಚಿವಾಲಯ

ನಗರ ಸಹಕಾರಿ ಬ್ಯಾಂಕು, ಜಮಖಂಡಿ

ಟೌನ್‌ಮುನಿಸಿಪಲ್ ಕಾರ್ಪೋರೇಷನ್, ಜಮಖಂಡಿ

ಕೇಂದ್ರ ಲಲಿತ ಕಲಾ ಅಕಾಡೆಮಿ, ನವದೆಹಲಿ

ಕರ್ನಾಟಕ ಲಲಿತ ಕಲಾ ಅಕಾಡೆಮಿ

ನ್ಯಾಷನಲ್ ಗ್ಯಾಲರಿ ಆಫ್ ಮಾಡರ್ನ್ ಆರ್ಟ್, ನವದೆಹಲಿ

ಆಂಧ್ರಪ್ರದೇಶ ಲಲಿತ ಕಲಾ ಅಕಾಡೆಮಿ

ಕೇಂದ್ರ ಲಲಿತಕಲಾ ಅಕಾಡೆಮಿಯ ವಿಭಾಗೀಯ ಕೇಂದ್ರ, ಚನ್ನೈ

ಅಕೆಡೆಮಿ ಆಫ್ ಫೈನ್ ಆರ್ಟ್ಸ್, ಕಲ್ಕತ್ತ

ಆರ್ಟ್ ಸೊಸೈಟಿ ಆಫ್ ಇಂಡಿಯಾ, ಮುಂಬಯಿ

ರಾಜ್ಯಪಾಲರ ಭವನ ಪಶ್ಚಿಮ ಬಂಗಾಳ

ದಕ್ಷಿಣ ಕೇಂದ್ರವಲಯ ಸಾಂಸ್ಕೃತಿಕ ಕೇಂದ್ರ, ನಾಗಪುರ

ಹಾಗೂ ಇನ್ನೂ ಹಲವಾರು ದೇಶ ವಿದೇಶಗಳ ಮುಖ್ಯ ಕಲಾ ಸಂಗ್ರಾಹಕರ ಸಂಗ್ರಹಗಳಲ್ಲಿ.

•




ಕಲಾವಿದರ ಮಗಳು ಪೂರ್ಣಿಮಾ

ಮಾಧ್ಯಮ : ತೈಲವರ್ಣ

Artist's daughter Poornima

Medium : Oil on Canvas



''ಸೂರ್ಯೋದಯ- ಸೂರ್ಯಾಸ್ತಗಳ ಗ್ರಹಿಕೆಗಳು''
ಮಾಧ್ಯಮ : ತೈಲವರ್ಣ

"Impressions of dawn-dusk"
Medium : Oil on Canvas

President's Note

The publication of books is an important project of the Karnataka Lalit Kala Academy. Books on many senior and contemporary artists have already come out. These books introduce the artist and his work to the people. It also helps the public to learn about the developments in the field of art.

